# ಬಾಳುವೆ ಮಾಡಿದರೆ ಬಾ ತಂಗಿ ಅಂದಾರು

## ಗೃಹಿಣಿಗೆ ಜನಪದ ನೀತಿ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಪ್ರೊ. ಡಿ. ಲಿಂಗಯ್ಯ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೪

# ಬಾಳುವೆ ಮಾಡಿದರೆ ಬಾ ತಂಗಿ ಅಂದಾರು

## ಗೃಹಿಣಿಗೆ ಜನಪದ ನೀತಿ


**ಪ್ರೊ. ಡಿ. ಲಿಂಗಯ್ಯ**

690, 7ನೇ ಬ್ಲಾಕ್, 2ನೇ ಫೇಸ್,
ಬನಶಂಕರಿ 3ನೇ ಹಂತ, ಬೆಂಗಳೂರು – 560 085



**ಕರ್ನಾಟಕ ಜಾನಪದ ಪರಿಷತ್ತು**

ನಂ.1, ಜಲದರ್ಶಿನಿ ಲೇಔಟ್,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

**BALUVE MADIDARE BA TANGI ANDARU -**
Folk Ethis to House Wife - by Prof. D. LINGAIAH.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ ೨೦೦೮

ಪ್ರತಿಗಳು ೨೦೦೦

ಪುಟಗಳು ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

**ಹಕ್ಕುಗಳು ಲೇಖಕರಿಗೆ ಸೇರಿವೆ**

ಗ್ರಂಥ ಪ್ರಕಟಣ ಸಲಹಾ ಸಮಿತಿ

| | |
|---|---|
| ನಾಡೋಜ ಡಾ. ಜಿ. ನಾರಾಯಣ | ಅಧ್ಯಕ್ಷರು |
| ಶ್ರೀ ಟಿ. ತಿಮ್ಮೇಗೌಡ | ಸದಸ್ಯರು |
| ಶ್ರೀಮತಿ ಇಂದಿರಾ ಬಾಲಕೃಷ್ಣ | ಸದಸ್ಯರು |
| ಶ್ರೀ ಗೊ.ರು. ಚನ್ನಬಸಪ್ಪ | ಸದಸ್ಯರು |
| ನಾಡೋಜ ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ಡಾ. ಎಂ.ಎ. ಜಯಚಂದ್ರ | ಸದಸ್ಯರು |
| ಪ್ರೊ. ಡಿ. ಲಿಂಗಯ್ಯ | ಸಂಪಾದಕರು |
| ಡಾ. ಚಕ್ಕೆರೆ ಶಿವಶಂಕರ್ | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಪ್ರೊ. ಡಿ. ಲಿಂಗಯ್ಯ** ಅವರು **ಬಾಳುವೆ ಮಾಡಿದರೆ ಬಾ ತಂಗಿ ಅಂದಾರು** ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೫-೦೧-೨೦೦೮

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ಬಾಳುವೆ ಮಾಡಿದರೆ ಬಾ ತಂಗಿ ಅಂದಾರು

ಜಗತ್ತಿನ ಎಲ್ಲಾ ಜನಾಂಗದಲ್ಲೂ ನೀತಿಸಾಹಿತ್ಯವಿದೆ. ಅದು ಮೌಖಿಕವಾಗಿರಬಹುದು; ಗ್ರಂಥಸ್ಥವಾಗಿರಬಹುದು. ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಪ್ರದರ್ಶನ ಕಲೆಗಳಲ್ಲೂ ಪರೋಕ್ಷವಾಗಿಯೋ ಪ್ರತ್ಯಕ್ಷವಾಗಿಯೋ ನೀತಿಯ ಅಂಶವಿರುವುದನ್ನು ಕಾಣಬಹುದು. ಕನ್ನಡ ಜನಪದ ಗೀತೆಗಳೂ ಇದಕ್ಕೆ ಹೊರತಾಗಿಲ್ಲ.

ಜನಪದ ಗೀತೆಗಳಲ್ಲಿ ಕಥಾಪ್ರಸಂಗಗಳ ನಡುವೆಯೋ ಬಿಡಿಗೀತೆಗಳ ಹಾಡುಗಾರಿಕೆಯಲ್ಲೋ ಸಂಭವಿಸಿದ ಸಂದರ್ಭದ ಪರಿಣಾಮದ ಪ್ರಭಾವವನ್ನು ವಿವರಿಸುವಾಗಲೋ ನೀತಿಬೋಧೆ ಕಾಣಿಸಿಕೊಳ್ಳುವುದುಂಟು. ಈ ನೀತಿಸೂಕ್ತಿಗಳು ಜನಪದರಿಗೆ ಮೌಖಿಕ ಶಿಕ್ಷಣದಂತೆ ಪರಿಣಮಿಸುತ್ತವೆ.

ಹೆಣ್ಣನ್ನು ಕುರಿತ ನೀತಿಯ ಹಾಡುಗಳು ವಿಶಿಷ್ಟವಾಗಿವೆ. ಇವು ಹೆಣ್ಣಿನ ಸರ್ವತೋಮುಖ ಏಳಿಗೆಗಾಗಿ ಹುಟ್ಟಿಕೊಂಡಿವೆ. ಹೆಣ್ಣಿನಿಂದ, ಹೆಣ್ಣಿಗಾಗಿ ಸೃಷ್ಟಿಯಾಗಿರುವ ನೀತಿಗೀತೆಗಳು ಮಾರ್ಮಿಕವಾಗಿವೆ; ಮನನೀಯವಾಗಿವೆ. ಹೆಣ್ಣಿಗೆ ಸಂಬಂಧಿಸಿದ ಬಹುಪಾಲು ನೀತಿಗೀತೆಗಳು ಹೆಣ್ಣಿನಿಂದಲೇ ಸೃಷ್ಟಿಯಾಗಿರುವುದರಿಂದ ಹೆಣ್ಣಿನ ಅಂತರಂಗವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಸಂಸಾರದ, ಸಮಾಜದ ಬಹುಮುಖ್ಯ ಅಂಗವಾದ ಸ್ತ್ರೀಯ ಸರ್ವತೋಮುಖ ವ್ಯಕ್ತಿತ್ವಪ್ರಕಾಶಕ್ಕೆ ನೀತಿಗಿತೆಗಳು ಬೀರಿರುವ ಪ್ರಭಾವ ಅಧಿಕವಾಗಿದೆ.

ಹೆಣ್ಣಿಗೆ ತೌರಿನಲ್ಲೇ ನೀತಿಯ ಪ್ರಥಮ ಪಾಠವಾಗುತ್ತದೆ. ಇದಕ್ಕೂ ಹೆತ್ತ ತಾಯಿಯೇ ಮೊದಲ ಗುರುವಾಗುತ್ತಾಳೆ. ತಂದೆ ಅಜ್ಜಿ ಮೊದಲಾದ ಹಿರಿಯರ ಪಾಲೂ ಸೇರುತ್ತದೆ. ತೌರಿನಲ್ಲಿ ಮೈಗೂಡಿಸಿಕೊಂಡ ಏನೆಲ್ಲಾ ಸದ್ಗುಣಗಳನ್ನು ಗಂಡನ ಮನೆಯಲ್ಲಿ ಪರಿಣಾಮಕಾರಿಯಾಗಿ ಬಳಸಲು ನೀತಿಬೋಧೆ ಸಹಾಯಕವಾಗುತ್ತದೆ. ನೈತಿಕ ನೆಲಗಟ್ಟಿನ ತೌರಿನಲ್ಲಿ

ಬೆಳೆದ ಹೆಣ್ಣು ಮಗಳು ಗಂಡನ ಮನೆಯಲ್ಲಿ ಯಶಸ್ವಿಯಾಗಿ ಪರಿಪೂರ್ಣ ಗೃಹಿಣಿಯಾಗುತ್ತಾಳೆ.

ಹೆಣ್ಣಿನ ಹಿನ್ನೆಲೆಯ ನೀತಿವಾಕ್ಯಗಳಲ್ಲಿ ಹೆಣ್ಣಿನ ಜೀವನಕ್ಕೆ ಅನಿವಾರ್ಯವಾದ ಶಾಂತಿ, ಸಹನೆ, ಸಂಯಮ, ತಾಳ್ಮೆ, ತ್ಯಾಗ, ಪ್ರೀತಿ, ಪ್ರೇಮ, ವಾತ್ಸಲ್ಯ, ಅನುಕಂಪ, ಕ್ಷಮೆ ಮೊದಲಾದ ಮಾನವೀಯ ಗುಣಗಳು ಎದ್ದುಕಾಣುತ್ತವೆ. ಯಶಸ್ವಿ ಗೃಹಿಣಿಯಾಗಲು ಇವು ಉತ್ತೇಜನ ನೀಡುತ್ತವೆ. ಜೀವಪರವಾದ, ನೆರೆಹೊರೆ ಹಿತಕಾರಿಯಾದ, ಸಮೃದ್ಧಿಯ ಜೀವನಕ್ಕೆ ಸಂಜೀವಿನಿಯಾದ ನೀತಿಸೂಕ್ತಿಗಳು ಜನಪದ ಮಹಿಳೆಯ ದಾರಿದೀಪವಾಗಿವೆ. ಪರಸ್ಪರ ಕೂಡಿಬಾಳುವ, ಅನುಸರಿಸಿಕೊಂಡು ಬದುಕುವ, ನೆಮ್ಮದಿಯನ್ನು ಅನುಭವಿಸುವ ಮರ್ಮವನ್ನು ತಿಳಿಸುವ ನೀತಿಗೀತೆಗಳಿಗೆ ಜನಪದರು ಸಹಜವಾಗಿಯೇ ಒಲಿದಿದ್ದಾರೆ. ತಮ್ಮ ಮಕ್ಕಳು ಮರಿಮಕ್ಕಳೂ ಇವುಗಳನ್ನು ಅನುಕರಿಸಲು, ಆದರಿಸಲು, ಅನುಸರಿಸಲು ಬಯಸುತ್ತಾರೆ.

ತೌರಿನಲ್ಲಿ ಹುಟ್ಟಿ ಬೆಳೆದ ಹೆಣ್ಣು ಮಗಳು ಗಂಡನ ಮನೆಯನ್ನು ಸೇರಿದಮೇಲೆ, ಅಲ್ಲಿ ಅವಳ ಬಾಳಿನ ಹೊಸ ಅಧ್ಯಾಯ ಪ್ರಾರಂಭವಾಗುತ್ತದೆ. ಹೊಸ ಊರು, ಹೊಸ ಮನೆ, ಹೊಸ ಜನ, ಹೊಸ ಪರಿಸರ, ಹೊಸ ಸಂವೇದನೆ. ಎಲ್ಲವೂ ಹೊಸತು. ಅದಕ್ಕೆ ಹೊಂದಿಕೊಳ್ಳುವುದು ಎಂಥವರಿಗಾದರೂ ಕಷ್ಟವೇ. ಪಾಲಿಗೆ ಬಂದಿದ್ದನ್ನು ಪಂಚಾಮೃತವೆಂದು ಸ್ವೀಕರಿಸಿ, ಎದುರಾದುದನ್ನು ಸವಾಲೆಂದು ಎದುರಿಸಿ, ಜಯಶಾಲಿಯಾಗುವುದು ಸಾಹಸದ ಮಾತೇ. ಗಂಡನ ಮನೆಯಲ್ಲಿ ಹೇಗಿರಬೇಕು; ಯಾರೊಡನೆ ಹೇಗೆ ಮಾತಾಡಬೇಕು; ಯಾವ ಕೆಲಸವನ್ನು ಹೇಗೆ ನಿರ್ವಹಿಸಬೇಕು; ಹಿರಿಯರನ್ನು ಕಿರಿಯರನ್ನು, ಸಮಾನರನ್ನು ಹೇಗೆ ಸಂಬಾಳಿಸಬೇಕು; ಗಂಡನ, ಅತ್ತೆಯ, ಮಾವನ, ಇತರರ ಮನಸ್ಸನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಮುಂತಾದವುಗಳನ್ನೆಲ್ಲಾ ಸೂಕ್ಷ್ಮವಾಗಿ ಪರಿಶೀಲಿಸಿ ಹೆಜ್ಜೆಯಿಡಬೇಕಾಗುತ್ತದೆ. ಅಂತಹ ಸಂದಿಗ್ಧ ಸಮಯದಲ್ಲಿ

ತಾಳ್ಮೆ, ತ್ಯಾಗ, ಬುದ್ಧಿವಂತಿಕೆ ಎಷ್ಟಿದ್ದರೂ ಸಾಲದು. ಎಲ್ಲವನ್ನೂ ಸವರಿಸಿಕೊಂಡು ಸಂಸಾರ ಮಾಡುವ ಗುಟ್ಟನ್ನು ಜನಪದ ನೀತಿಗೀತೆಗಳು ಸಾರುತ್ತವೆ. ಇವು ಜನಪದ ಸಂಸ್ಕೃತಿಯ ದಿಕ್‌ಸೂಚಿಗಳಷ್ಟೇ ಅಲ್ಲ, ಹೆಣ್ಣಿನ ಸಾಂಸಾರಿಕ ಜೀವನದ ಯಶಸ್ಸಿನ ದಿಕ್ಸೂಚಿಗಳೂ ಹೌದು. ಸಂಸಾರ, ಸಮಾಜ, ಸ್ನೇಹ, ಅನ್ಯರ ಪರಿಚಯ, ಆಸೆ ಆಕಾಂಕ್ಷೆ, ಚಟ ಚಲ್ಲಾಟ ಮೊದಲಾದ ಸಂದರ್ಭಗಳಲ್ಲೆಲ್ಲಾ ಹೆಣ್ಣು ನೀತಿಯ ಎಲ್ಲೆಯನ್ನು ಮೀರದಂತೆ ನಡೆದುಕೊಳ್ಳಬೇಕಾಗುತ್ತದೆ. ಮಿತಿ ಮೀರಿದರೆ ನೋವು, ಸಂಕಟ, ಅವಮಾನ, ಆತ್ಮಗ್ಲಾನಿ, ದುರಂತ ನಿಶ್ಚಯ. ಆದರ್ಶ ತಾಯಿಯ ಮಾರ್ಗದರ್ಶನದಲ್ಲಿ ಬೆಳೆದ ಮಗಳು ಆದರ್ಶ ಗೃಹಿಣಿಯಾಗಬಲ್ಲಳು. ಮುಂದೆ ತಾನೂ ಆದರ್ಶ ತಾಯಿಯಾಗಬಲ್ಲಳು. ಅಂಥವರ ಕಣ್ಣಳತೆಯಲ್ಲಿ ಬೆಳೆದ ಮಕ್ಕಳು ಸಂಸಾರಕ್ಕೂ ಸಮಾಜಕ್ಕೂ ಆದರ್ಶವಾಗುತ್ತಾರೆ; ಅನುಕರಣೀಯರಾಗುತ್ತಾರೆ. ಹೆಣ್ಣು ಸದ್ಗುಣಿಯಾದರೆ ಗಂಡನನ್ನು ತಿದ್ದಬಹುದು; ಮಕ್ಕಳನ್ನು ತಿದ್ದಬಹುದು; ತನ್ನ ಪರಿಸರಕ್ಕೆ ಬಂದ ಸಂಬಂಧಿಕರನ್ನು ತಿದ್ದಬಹುದು. ಆ ಮೂಲಕ ಸಂಸಾರದ ಸಮಾಜದ ಶೀಲವನ್ನು ಸಂರಕ್ಷಿಸಬಹುದು, ಸದೃಢ ದೇಶವನ್ನು ಕಟ್ಟಬಹುದು. ಹೆಣ್ಣು ಚೆನ್ನಾಗಿ ಬಾಳಿದರೆ ಸಂಸಾರ ಉಳಿಯುತ್ತದೆ, ಸಮಾಜ ಉಳಿಯುತ್ತದೆ. ಹೆಣ್ಣು ಕೆಟ್ಟರೆ ಸಂಸಾರ ಕೆಡುತ್ತದೆ, ಸಮಾಜ ಕೆಡುತ್ತದೆ.

ಜನಪದ ಗೀತೆಗಳಲ್ಲಿ ಕಂಡುಬರುವ ನೀತಿ ಕೇವಲ ವ್ಯಕ್ತಿ ನಿಷ್ಠವಾದದ್ದಲ್ಲ, ಸಮಾಜಮುಖಿಯಾದದ್ದು, ಸಮಷ್ಟಿ ಹಿತಕಾರಿಯಾದದ್ದು. ಅದು ಕೇವಲ ನಿರ್ದಿಷ್ಟ ಕಾಲಕ್ಕೆ ಸಂಬಂಧಿಸಿದ್ದಲ್ಲ, ಇಂದಿಗೂ ಪ್ರಸ್ತುತವಾದದ್ದು. ಅದು ನಿರ್ದಿಷ್ಟ ಜಾತಿ, ಜನಾಂಗ ಧರ್ಮಕ್ಕೆ ಸೇರಿದ್ದಲ್ಲ; ಎಲ್ಲವನ್ನೂ ಮೀರಿದ್ದು; ಎಲ್ಲಕ್ಕೂ ಎಲ್ಲರಿಗೂ ಬೇಕಾಗುವಂಥದ್ದು. ಆರೋಗ್ಯಪೂರ್ಣ ಸಮಾಜಕ್ಕಾಗಿ, ಮನುಕುಲಕ್ಕಾಗಿ ಜನಪದ ನೀತಿಗೀತೆಗಳನ್ನು ಮನನಮಾಡುವುದು ಅಗತ್ಯ. ಹೆಣ್ಣಿನ ದೃಷ್ಟಿಯ

ನೀತಿಗೀತೆಗಳಲ್ಲೂ ಸಮಗ್ರ ಸಮಾಜದ ಸಂವರ್ಧನೆಯು ಕಾಳಜಿಯಿರುವುದನ್ನು ಗಮನಿಸಬಹುದು.

ಜನಪದ ಗೀತೆಗಳಲ್ಲಿ ಹೆಣ್ಣಿಗೆ ಸಂಬಂಧಿಸಿದ ನೀತಿಗೀತೆಗಳು ಹೆಚ್ಚಾಗಿರಲು ಕಾರಣವೇನು? ಹೆಣ್ಣೇ ಹೆಣ್ಣಿಗೆ ನೀತಿಬೋಧೆ ಮಾಡಿರುವ ಹಿನ್ನೆಲೆಯೇನು? ಹೆಣ್ಣಿನ ವ್ಯಕ್ತಿತ್ವವಿಕಾಸಕ್ಕೆ ಇಷ್ಟೊಂದು ಗಮನಕೊಟ್ಟಿರುವ ಉದ್ದೇಶವೇನು? ಹೆಣ್ಣಿನ ಯಶಸ್ಸಿನ ಮೂಲಕ ಗಂಡಿನ ಯಶಸ್ಸನ್ನು; ಸಂಸಾರದ, ಸಮಾಜದ ಏಳಿಗೆಯನ್ನು ಬಯಸಿರುವ ಜನಪದ ಮನಸ್ಸಿನ ಆಶಯದ ಮರ್ಮವೇನು? ನೀತಿ ಬೋಧನೆಗೆ ಅನುಸರಿಸಿರುವ ಮಾರ್ಗವೇನು? ಮೊದಲಾದವುಗಳನ್ನು ವೈಚಾರಿಕವಾಗಿ, ವೈಜ್ಞಾನಿಕವಾಗಿ, ವಿವರವಾಗಿ ಅಧ್ಯಯನಮಾಡುವ ಅಗತ್ಯವಿದೆ. ಆಧುನಿಕ ಸಂಸಾರದ ಹಲವು ಒಡಕುಗಳಿಗೆ ಜನಪದ ನೀತಿವಾಕ್ಯಗಳಿಂದ ಪರಿಣಾಮಕಾರಿಯಾದ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಿದೆ.

ಅಲೆಮಾರಿಯಾಗಿದ್ದ ಆದಿಮಾನವ ಬೇಟೆಯನ್ನು ಕಡಮೆ ಮಾಡಿ, ಕೃಷಿಯನ್ನು ಅವಲಂಬಿಸಿ, ಸಾಮಾಜಿಕ ವ್ಯವಸ್ಥೆಯನ್ನು ರೂಢಿಸಿಕೊಂಡು, ಪ್ರಾಣಿಗಳಿಗಿಂತ ಭಿನ್ನವಾಗಿ ಬದುಕಲು ಬಯಸಿದ ಸಂದರ್ಭದಲ್ಲಿ ನೀತಿಸಂಹಿತೆ ಅಗತ್ಯವಾಯಿತು. ಬಿಗಿಯಾದ ನೈತಿಕ ನೆಲೆಗಟ್ಟಿನ ಮೇಲೆ, ದೃಢವಾದ ಕೌಟುಂಬಿಕ ಜೀವನ ಸಾಧ್ಯವೆಂಬ ಕಲ್ಪನೆ ಮೂಡಿತು. ನೈತಿಕ ಚಿಂತನ ಮನುಕುಲದ ವೈಶಿಷ್ಟ್ಯವಾಯಿತು. ಹೆಣ್ಣು ಗಂಡು ಇಬ್ಬರಿಗೂ ನೀತಿಯ ಲಕ್ಷ್ಮಣ ರೇಖೆಗಳು ರೂಢಿಗೆ ಬಂದವು. ಸಂಸಾರದ ಸ್ವಾಸ್ಥ್ಯಕ್ಕೆ ಸ್ತ್ರೀ ಕೇಂದ್ರಬಿಂದುವಾದುದರಿಂದ, ಅವಳಿಗೆ ಸಂಬಂಧಿಸಿದ ನೀತಿಸೂತ್ರಗಳು ಅಥವಾ ಹಿತವಚನಗಳು ಎದ್ದುಕಾಣಲಾರಂಭಿಸಿದವು. ಒಟ್ಟು ಸಂಸಾರದ ನಿರ್ವಹಣೆಗೆ ಹೆಣ್ಣು ಗಂಡಿನ ನಡುವೆ ಪರಸ್ಪರ ಕೊಳುಕೊಡೆ, ಅನುಸರಣೆ, ತ್ಯಾಗ ಮನೋಭಾವ ಅಗತ್ಯವೆಂಬ ಅರಿವನ್ನು ತಲೆತಲಾಂತರದಿಂದ ಹರಿದುಬಂದ ನೀತಿ ಸಂದೇಶಗಳು ಸಾರಿದವು. ನೂರು ವಸಂತಗಳನ್ನು ಕಾಣಬಯಸುವ ತುಂಬು ಜೀವನದ, ಸುಖ ಸಂಸಾರದ ಮಹಿಳೆಗಂತೂ

ಸನಾತನ ನೀತಿಸೂಕ್ತಿಗಳು ಭರವಸೆಯ ಊರುಗೋಲಾದವು.

ಸ್ವಾತಂತ್ರ್ಯ, ಸ್ವಚ್ಛಂದ, ಅತಿ ಸುಖಾಪೇಕ್ಷೆ, ದುರಾಸೆ, ದೀರ್ಘ ಆಯಸ್ಸಿನ ಅನಿಶ್ಚಯತೆ, ತ್ಯಾಗದ ಕೊರತೆ, ದುಡುಕು ಸ್ವಭಾವ, ಸೌಶೀಲ್ಯದ ಅವಜ್ಞೆ ಮೊದಲಾದವುಗಳಿಂದ ನೈತಿಕ ಪ್ರಜ್ಞೆ ಕುಸಿದು, ಆಧುನಿಕ ಮನಸ್ಸು, ಮನೆ ಛಿದ್ರಗೊಂಡಿದೆ; ಅಶಾಂತಿ, ಅಸಹಾಯಕತೆ ತುಂಬಿಕೊಂಡಿದೆ. ಸುಖ ಸಂಸಾರದ ನೆಮ್ಮದಿಗೆ ಆರೋಗ್ಯಪೂರ್ಣ ಮನಸ್ಸಿಗೆ ಪೂರಕವಾಗುವ ನೀತಿಯ ನೆಲಗಟ್ಟನ್ನು ಅವಲಂಬಿಸದಿದ್ದರೆ ಬದುಕು ದುರ್ಬರವಾಗುತ್ತದೆ.

ಜನಪದ ನೀತಿಗೀತೆಗಳಲ್ಲಿ ಸ್ತ್ರೀಯ ಶೋಷಣೆಯನ್ನು ಗುರುತಿಸುವ ಸ್ತ್ರೀವಾದಿ ಚಿಂತಕರೂ ಉಂಟು. ಅದು ಪಾಶ್ಚಾತ್ಯ ಚಿಂತನೆಯ ಅನುಕರಣೆಯ ಫಲ. ಆಳವಾಗಿ ಅಭ್ಯಾಸ ಮಾಡಿದರೆ ಜನಪದ ನೀತಿಗೀತೆಗಳ ಆಶಯ ಬೇರೆಯೇ ಆಗಿರುವುದು ಕಂಡುಬರುತ್ತದೆ. ಅಲ್ಲಿ ಸಾಮರಸ್ಯದ, ಸಮಾಧಾನದ ಸಮದರ್ಶನದ ಕೌಟುಂಬಿಕ ಜೀವನದ ವಿಶಾಲ ಹರಹು ಕಂಡುಬರುತ್ತದೆ; ಅದಕ್ಕಾಗಿ ಹೆಣ್ಣಿನ ಬಾಳಿನಲ್ಲಿ ನೀತಿಯ ನೆಲಗಟ್ಟು ಎಷ್ಟು ಅಗತ್ಯವೆಂಬುದು ವೇದ್ಯವಾಗುತ್ತದೆ. ಜನಪದ ಸ್ತ್ರೀಯ ಬದುಕಿನಲ್ಲಿ ಶೋಷಣೆಯ ಎಳೆಗಳು ಇವೆ ಎನ್ನುವುದಾದರೂ ಅವು ಆಧುನಿಕ ಸ್ತ್ರೀಯಷ್ಟು ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಅಂಥವುಗಳಿಗೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಗುರಿಮಾಡಬಹುದಾದರೂ ಸ್ತ್ರೀಯೆ ಅಭಿವ್ಯಕ್ತಿಸಿರುವ ನುಡಿಗಳಿಗೆ ಅಂಥ ಹೇಳಿಕೆಯನ್ನು ಹೇರಲಾಗುವುದಿಲ್ಲ. ಜನಪದ ಹಿನ್ನೆಲೆಯ ಸಂಸಾರಿಕ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುವ ಹೆಣ್ಣು, ಗಂಡಿನಿಂದ ಶೋಷಣೆಗೆ ಒಳಗಾಗುವ ಸಂಭವ ಕಡಮೆ. ದುಡಿಯುವ ಹೆಣ್ಣನ್ನು ಗಂಡಸು ಶೋಷಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಹೆಣ್ಣಾಗಲೀ ಗಂಡಾಗಲೀ ವಯಸ್ಸಾದ ಮಾತ್ರಕ್ಕೆ ನೀತಿಬೋಧೆ ಮಾಡುವುದಕ್ಕೆ ಅರ್ಹರಾಗುವುದಿಲ್ಲ. ಶುಚೀ ಜೀವನದ ನೀತಿವಂತರು ಮಾತ್ರ ನೀತಿಬೋಧನೆಗೆ ಅರ್ಹರಾಗುತ್ತಾರೆ. ಅಂಥವರ ಅನುಸರಣೆಗೆ

ಅನುಕರಣೆಗೆ ಮಾತ್ರ ಕಿರಿಯರು ಮನಗೊಡುತ್ತಾರೆ. ನೀತಿಸೂಕ್ತಿಗೆ ಅರ್ಹತೆ ಬೇಕು; ಅನುಸರಣೆಗೆ ವಿಧೇಯತೆ ಬೇಕು. ಎಲ್ಲಕ್ಕೂ ಆದರ್ಶದ ಬದುಕು ಆಧಾರವಾಗಬೇಕು. ಇಲ್ಲದಿದ್ದರೆ ನೀತಿಯುತವಾದ ಸಂಸಾರವನ್ನಾಗಲೀ ದೇಶವನ್ನಾಗಲೀ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಅನೀತಿವಂತರಿಂದ ವೈಯಕ್ತಿಕ ಚಾರಿತ್ರ್ಯವೂ ಹಾಳಾಗುತ್ತದೆ, ಸಾಮೂಹಿಕ ಚಾರಿತ್ರ್ಯವೂ ಹಾಳಾಗುತ್ತದೆ.

ಕನ್ನಡ ಜನಪದ ಗೀತೆಗಳಲ್ಲಿ ಬೇಕಾದಷ್ಟು ನೀತಿಗೀತೆಗಳಿವೆ. ಹೆಣ್ಣನ್ನು ದೃಷ್ಟಿಯಲ್ಲಿಟ್ಟುಕೊಂಡು ಹುಟ್ಟಿರುವ ಕೆಲವು ನೀತಿಗೀತೆಗಳನ್ನು ಮುಂದೆ ಸೋದಾಹರಣವಾಗಿ ವಿವರಿಸಿದೆ:

*ಅತ್ತೆ ಮಾವರಿಗಂಜಿ ಸುತ್ತೇಳು ನೆರೆಗಂಜಿ*
*ಮತ್ತೆ ಆಳುವ ದೊರೆಗಂಜಿ – ಮಗಳೆ*
*ಅತ್ತೆ ಮನೆಯಾಗೆ ಬಾಳಮ್ಮ*

ಪ್ರೀತಿಯಿಂದ ಸಾಕಿ ಸಲಹಿದ ಹೆಣ್ಣುಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುವಾಗ ತಾಯಿ ತಂದೆಯರು ನಾನಾ ರೀತಿಯ ಬುದ್ಧಿವಾದ ಹೇಳುತ್ತಾರೆ. ಹೊಸ ಮನೆಗೆ ಹೋಗುವ ಮಗಳು ಅಲ್ಲಿಗೆ ಹೊಂದಿಕೊಳ್ಳುವುದು, ಅಲ್ಲಿಯವರನ್ನು ಅರ್ಥಮಾಡಿಕೊಳ್ಳುವುದು, ಬಹಳ ಮುಖ್ಯ. ಚಿಕ್ಕವಯಸ್ಸಿಗೆ ಮದುವೆಯಾಗುವ ಹೆಣ್ಣುಮಕ್ಕಳಿಗಂತೂ ಏನೇನೂ ಅನುಭವ ಸಾಲದು. 'ಹೆಣ್ಣು ಕೊಟ್ಟೆಯೋ ಕಣ್ಣು ಕೊಟ್ಟೆಯೋ' ಎಂಬ ಗಾದೆಯಿದೆ. ಮದುವೆಯಾದ ಮಗಳು ತೌರುಮನೆಯನ್ನೂ ಗಂಡನ ಮನೆಯನ್ನೂ ಬೆಳಗಬೇಕಾದವಳು. ಅವಳು ಆದರ್ಶ ಗೃಹಿಣಿಯಾಗಬೇಕಾದರೆ ಬಹಳ ಎಚ್ಚರದಿಂದಿರಬೇಕು.

ನಮ್ಮ ಸಮಾಜದಲ್ಲಿ ಅತ್ತೆ ಸೊಸೆಯ ಸಂಬಂಧ ಅಷ್ಟೇನೂ ಹಿತವಾಗಿಲ್ಲ. ಸೊಸೆಗೆ ಕಾಟಕೊಡುವ ಅತ್ತೆಯರೇ ಜಾಸ್ತಿ. ಏಕೋ ಏನೋ ಸೊಸೆಗೆ ಕಾಟಕೊಡುವ ಅತ್ತೆಯ ಸ್ಥಾನ ಎಲ್ಲರ ಟೀಕೆಗೂ

ಪಾತ್ರವಾಗಿದೆ. ಅತ್ತೆ ಸೊಸೆಯರ ಕಲಹದ ಪ್ರಸಂಗಗಳು ನಮ್ಮ ದೇಶದಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತವೆ. ಹೆಣ್ಣಾಗಿ ಹೆಣ್ಣನ್ನು ಶೋಷಿಸುವ ಅತ್ತೆಯ ಮನಸ್ಥಿತಿ ಭಯಂಕರವಾಗಿದೆ. ಅತ್ತೆಯ ಜೊತೆಗೆ ಮಾವನೂ ಕಾಟಕೊಡಲು ಪ್ರಾರಂಭಿಸಿದರೆ ಮನೆಗೆ ಬಂದ ಸೊಸೆಯ ಗತಿಯೇನು?

ಅದಕ್ಕಾಗಿ ಅತ್ತೆ ಮಾವನಿಗೆ ಅಂಜಿ ಬಾಳಬೇಕೆಂದು ಹೆತ್ತ ತಾಯಿ ತಂದೆಯರು ಬಯಸುತ್ತಾರೆ. 'ಅಂಜು' ಎಂಬ ಶಬ್ದವನ್ನು ಬಳಸಿರುವ ಮನಸ್ಸು ಸ್ವಾನುಭವವನ್ನು ಅಭಿವ್ಯಕ್ತಿಸಿರುವಂತೆ ಭಾಸವಾಗುತ್ತದೆ. ಹಿಂದೆ ಆಳುವ ದೊರೆಗೂ ಹೆದರಬೇಕಾಗಿತ್ತು. ಈಗ ದೊರೆಗಳಿಲ್ಲ. ಆಳುವ ಜನಪ್ರತಿನಿಧಿಗಳಿದ್ದಾರೆ. ಅವರ ಬಗೆಗೂ ಹುಷಾರಾಗಿರಬೇಕಾಗುತ್ತದೆ. ಇಂಥ ಅಂಶಗಳನ್ನು ನೆನಪಿನಲ್ಲಟ್ಟುಕೊಂಡು ಮಗಳು ಅತ್ತೆ ಮನೆಯಲ್ಲಿ ಬಾಳಬೇಕೆಂಬುದು ಹೆತ್ತವರ ಬಯಕೆ.

*ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು*
*ಹೊತ್ತಾಗಿ ನೀಡಿದರು ಉಣಬೇಕು – ತೌರಿಗೆ*
*ಉತ್ತಮ ಹೆಸರು ತರಬೇಕು*

ಹೆಣ್ಣು ತೌರಿನಲ್ಲಿ ಬಯಸಿದ್ದನ್ನು ಉಣ್ಣಬಹುದು, ಉಡಬಹುದು, ತೊಡಬಹುದು. ಆದರೆ, ಅತ್ತೆ ಮನೆಯಲ್ಲಿ ಹಾಗೆ ಇರುವುದಕ್ಕೆ ಆಗದಿರಬಹುದು. ಆಗ ಸಂಯಮದಿಂದ ಅಲ್ಲಿಯ ಸಂದರ್ಭಕ್ಕೆ ಹೊಂದಿಕೊಳ್ಳಬೇಕು. ಇಲ್ಲದಿದ್ದರೆ ನಿಷ್ಠುರಕ್ಕೆ ಪಾತ್ರವಾಗಬೇಕಾಗುತ್ತದೆ.

ಅತ್ತೆಯ ಮನೆಯಲ್ಲಿ ಎಲ್ಲರಿಗೂ ಬೇಕಾದವಳಾಗಿರಬೇಕು. ಅದೂ ಮುತ್ತಿನ ರೀತಿಯಲ್ಲಿ. ಮುತ್ತು ಬೆಲೆಬಾಳುವಂಥದ್ದು; ಹೊಳಪಾದದ್ದು. ಆದರೆ ಮಾತಾಡುವಂಥದ್ದಲ್ಲ. ಆಕೆ ಮನೆಯ ಸೊಸೆಯಾದರೂ ಮಾತು ಮರೆತವಳಂತೆ ಇರಬೇಕಾಗುತ್ತದೆ. ಹೊತ್ತುಮೀರಿ ಊಟಕ್ಕಿಟ್ಟರೂ ಸಹಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ತೌರಿಗೆ ಒಳ್ಳೆಯ ಹೆಸರು ತರಬಹುದೆಂದು ಹೆತ್ತವರ ಆಶಯ. ಹಾಗೆ ನಡೆದುಕೊಳ್ಳಬೇಕೆಂದೇ ಸಮಾಜ ಬಯಸುತ್ತಿದ್ದಂತೆ ಕಾಣುತ್ತದೆ. ಒಂದು ರೀತಿಯಲ್ಲಿ ಇದು

ಸ್ತ್ರೀಯ ಸ್ವಾತಂತ್ರ್ಯವನ್ನೇ ಕಸಿದುಕೊಂಡಂತೆ. ಆದರೆ ಸೊಸೆಯರಿಗೆ ಬೇರೆ ದಾರಿಯಿರಲಿಲ್ಲ.

ಇಲ್ಲಿ ಗಂಡನ ಮನೆ ಎನ್ನುವುದಕ್ಕೆ ಬದಲಾಗಿ ಅತ್ತೆಮನೆ ಎಂದಿರುವುದು ವಿಚಿತ್ರವಾಗಿದೆ; ಕಟುವಾಸ್ತವಕ್ಕೆ ಹತ್ತಿರವಾಗಿದೆ. ಅದು ಅತ್ತೆಯ ಯಜಮಾನಿಕೆ ಇರುವ ಮನೆ. ಅಲ್ಲಿ ಗಂಡಿನ ದರ್ಬಾರೂ ಗೌಣ. ಹೆಂಡತಿಯ ಮೇಲೆ ಪ್ರೀತಿ ಇದ್ದರೂ ಗಂಡ ತಾಯಿಯ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳಲಾರ. ಇಂದಿನ ಉದಾರ ನೆಲೆಯ ಸ್ತ್ರೀವಾದಿ ಚಿಂತನೆಗೆ ಹಿಂದಿನ ಸೊಸೆಯ ಸ್ಥಿತಿ ಅನುಕಂಪೆಗೆ ಪಾತ್ರವಾಗುತ್ತದೆ. ಆದರೆ ಹಿಂದಿನ ಸಾಂಸಾರಿಕರಿಗೆ ಸೊಸೆಯ ಸ್ವಾತಂತ್ರ್ಯಕ್ಕಿಂತ ಒಟ್ಟು ಕುಟುಂಬದ ಹಿತ ಮುಖ್ಯವಾಗಿರುವಂತೆ ಕಾಣುತ್ತದೆ. ಏನೆಲ್ಲ ಕಷ್ಟವಿದ್ದರೂ ನುಂಗಿಕೊಂಡು, ಹೆಸರು ತರಬೇಕೆಂಬುದು ತವರಿನವರ ಉದ್ದೇಶವೂ ಆಗಿರುವಂತಿದೆ. ಮನೆತನದ ಹಿರಿಮೆ ಎಲ್ಲರಿಗೂ ಪ್ರತಿಷ್ಠೆಯ ವಿಷಯವಾಗಿದೆ.

*ನೆರೆಮನೆಯ ಸಿರಿದೇವಿ ನೀನಾಗು ಮಗಳೆ*
*ಮನೆಯೊಳು ಭೇದ ಬಗೆಬೇಡ – ಮಗಳೆ*
*ತುಂಬಿದ ಮನೆಯ ಒಡಿಬೇಡ*

ಹೆಣ್ಣು ತೌರಿನಲ್ಲಿ ಹುಟ್ಟಿ ಬೆಳೆದರೂ ದೀರ್ಘಕಾಲ ಇರೇಕಾದುದು ಗಂಡನ ಮನೆಯಲ್ಲಿ. ಅವಳ ಬಾಳಿನ ಸಾರ್ಥಕತೆ ಕಾಣುವುದು ಅಲ್ಲೇ. ಹಾಗಾಗಿ ಅವಳು 'ನೆರೆಮನೆಯ ಸಿರಿದೇವಿ'. ಅಂದರೆ ಗಂಡನ ಮನೆಯ ಮಹಾಲಕ್ಷ್ಮಿ. ತೌರಿಗೆ ಕೇವಲ ಮಗಳು, ಗಂಡನ ಮನೆಗೆ ಮಹಾಲಕ್ಷ್ಮಿ. ಅಂಥವಳು ಗಂಡನ ಮನೆಯಲ್ಲಿ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಮನೆಯವರ ನಡುವೆ ಭೇದವನ್ನು ಎಣಿಸಬಾರದು. ಹಾಗೆ ಮಾಡಿದರೆ ಆ ಮನೆ ಖಂಡಿತವಾಗಿಯೂ ಒಡೆದು ಛಿದ್ರವಾಗುತ್ತದೆ. ಹಾಗೆ ಮಾಡಬಾರದೆಂಬುದು ತೌರಿನವರ ಬಯಕೆ. ಅದು ಗಂಡನ ಮನೆಯವರ ಬಯಕೆಯೂ ಕೂಡ. ಗಂಡನ

ಮನೆಯನ್ನು ಹಾಳುಮಾಡಲಿ ಎಂದು ಯಾವ ತಾಯಿತಂದೆಯೂ ಬಯಸುವುದಿಲ್ಲ. ಅದಕ್ಕಾಗಿ ಮಗಳಿಗೆ ಸೂಕ್ಷ್ಮವಾಗಿ ತಿಳಿಯಹೇಳುತ್ತಾರೆ. ಅವಿಭಕ್ತ ಕುಟುಂಬದಲ್ಲಿ ಸೊಸೆಯ ಜವಾಬ್ದಾರಿ ಗಂಭೀರವಾಗಿರುವುದನ್ನು ಪೋಷಕರ ನೀತಿಯ ಮಾತು ಧ್ವನಿಸುತ್ತದೆ.

*ಬಾಳುವ ಮಾಡಿದರೆ ಬಾ ತಂಗಿ ಅಂದಾರು*
*ಬಾಳುವೆಗೆಟ್ಟು ಮತಿಗೆಟ್ಟು – ಬಾಳಿದರೆ*
*ಹೆತ್ತವರ ಕುಲಕೆ ಹಗೆಯಾದೆ.*

ಗಂಡನ ಮನೆಯಲ್ಲಿ ನಾಲ್ಕು ಮಂದಿ ಒಪ್ಪುವಂತೆ ಬಾಳುವೆ ಮಾಡುವವಳಿಗೆ ಮಾತ್ರ ಮನ್ನಣೆ. ಅಂಥ ಮಗಳೆಂದರೆ ತವರಿನವರಿಗೆ ಹೆಮ್ಮೆ. ಮದುವೆಯಾಗಿ ಹೋದ ಮನೆಯಲ್ಲಿ ಸರಿಯಾಗಿ ಬಾಳದೆ ಬುದ್ಧಿಗೆಟ್ಟು ಹಾಳಾದರೆ, ಅವಳ ಬದುಕು ಕೆಡವುದಷ್ಟೇ ಅಲ್ಲ, ಹೆತ್ತವರ ಹಗೆಯನ್ನೂ ಕಟ್ಟಿಕೊಳ್ಳಬೇಕಾಗುತ್ತದೆ. ಬಾಳುವೆ ಕೆಟ್ಟವಳನ್ನು ತವರಿನವರಾಗಲೀ ಗಂಡನ ಮನೆಯವರಾಗಲೀ ಮೆಚ್ಚುವುದಿಲ್ಲ. ಸದ್ಗೃಹಿಣಿಯನ್ನು ಮನಸಾರೆ ಪ್ರೀತಿಸುತ್ತಾರೆ. ಬಾಯಿತುಂಬ ಹೊಗಳುತ್ತಾರೆ. 'ಬಾ ತಂಗಿ' ಎಂದು ಸ್ವಾಗತಿಸುತ್ತಾರೆ. ಉತ್ತಮ ಬಾಳಾಟಕ್ಕೆ ಜನಪದರು ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ.

*ಮಾತ್ಗಂಟಿ ಮಗಳಲ್ಲ ತಾಟ್ಗಿತ್ತಿ ಸೊಸೆಯಲ್ಲ*
*ತೂಪರದ ಚಕ್ಕೆ ಒಲೆಗಲ್ಲ – ತೌರಿಗೆ*
*ಮಾತ ತಂದೋಳು ಮಗಳಲ್ಲ.*

ಜನಪದ ನೀತಿಸೂಕ್ತಿಗಳು ಜನಪದ ಬದುಕಿನ ನೀತಿಸಂಹಿತೆಯೂ ಹೌದು. ತೌರಿನಲ್ಲಾಗಲೀ ಗಂಡನ ಮನೆಯಲ್ಲಾಗಲೀ ಅವಳ ಮಾತುಕತೆ, ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಅತಿಯಾಗಿ ಕಂಡರೆ ಸಹಿಸುವುದಿಲ್ಲ. ಅತಿಯಾಗಿ ಮಾತಾಡುವವಳು ಮಗಳೇ ಆದರೂ ಒಪ್ಪುವುದಿಲ್ಲ. ಜಗಳಗಂಟಿ ಹೆಣ್ಣನ್ನು ಸೊಸೆಯೆಂದುಕೊಳ್ಳುವುದಿಲ್ಲ. ಉರಿಯುವಾಗ ಕಿಡಿಕಾರುವ ತೂಪರಗಿಡದ

ಚಕ್ಕೆ ಶಾಖಕೊಡುವುದಕ್ಕಿಂತ ಅತ್ತಿತ್ತ ಹಾರುವುದೇ ಹೆಚ್ಚು. ಅದು ಸೌದೆಯಷ್ಟು ಉಪಯೋಗವಲ್ಲ. ಗಾಂಭೀರ್ಯವಿಲ್ಲದ ಹೆಣ್ಣು ತೂಪರದ ಚಕ್ಕೆಯಂತೆ ಲಘುವಾಗುತ್ತಾಳೆ. ಅಂಥವಳಿಂದ ತೌರಿಗೆ ಕೆಟ್ಟ ಹೆಸರು ಬರುತ್ತದೆ. ಹೀಗಾಗಬಾರದೆಂಬುದಕ್ಕೆ ಹೆತ್ತವರ ಬುದ್ಧಿವಾದ ಮುಂದಾಗುತ್ತದೆ.

*ಹಿರಿಯೋರ ಮಾತಿಗೆ ಇದಿರೊಂದು ನುಡಿಬ್ಯಾಡ*
*ಹಿರಿಯೋರ ಮೀರಿ ನಡಿಬ್ಯಾಡ – ತಂಗ್ಯಮ್ಮ*
*ಹಿರಿದಾಗಿ ಬಾಳ ನಡೆಸಮ್ಮ*

ಮದುವೆಯಾಗಿ ಅತ್ತೆಮನೆಯನ್ನು ಸೇರಿದ ಮಗಳು ಸಂಸಾರದಲ್ಲಿ ಉತ್ತಮವಾಗಿ ಬಾಳಬೇಕಾದರೆ ಒಂದೆರಡು ಅನುಭವದ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡು ಅನುಸರಿಸಲು ಬಯಸುತ್ತಾರೆ. ಒಳ್ಳೆಯದನ್ನು ಬಯಸುವ ಅತ್ತೆ ಮಾವ ಮೊದಲಾದ ಹಿರಿಯರು ಏನಾದರೂ ತಿಳುವಳಿಕೆ ಹೇಳಿದರೆ, ಪಟ್ಟನೆ ಪ್ರತಿಭಟಿಸಿ ಎದುರುತ್ತರ ಕೊಡಬಾರದು. ಹಿರಿಯರ ಮಾತನ್ನು ಬದುಕಿನ ರೀತಿಯನ್ನು ಮೀರಬಾರದು. ಹೀಗೆ ಮಾಡುವುದರಿಂದ ಅವರಿಗೆ ಬೇಸರವಾಗುತ್ತದೆ; ಆಗಬೇಕಾದ ಕೆಲಸವೂ ಸರಿಯಾಗಿ ಆಗುವುದಿಲ್ಲ. ಅತ್ತೆಯ ಮನೆಯ ವ್ಯವಹಾರ ಅಭ್ಯಾಸವಾಗುವವರೆಗೆ ಹಿರಿಯರ ದಾರಿಯನ್ನು ಅನುಸರಿಸುವುದೇ ಕ್ಷೇಮ. ಮನೆಗೆದ್ದು ಮಾರುಗೆಲ್ಲು ಎಂಬ ಮಾತಿದೆ. ಮನೆಗೆಲ್ಲುವುದೆಂದರೆ ಮನೆಯವರನ್ನು ಗೆಲ್ಲುವುದು ಎಂದೇ ಅರ್ಥ. ಮನೆಯವರ ಮನಸ್ಸನ್ನು ಗೆದ್ದರೆ ಎಲ್ಲವನ್ನೂ ಗೆದ್ದಂತೆ. ಮದುವೆಯಾದ ಹೆಣ್ಣಿಗೆ ತಾಯಿ ತಂದೆ ಅಕ್ಕ ಅಣ್ಣ ನೆರೆಹೊರೆಯವರು ಇಂತಹ ನೀತಿಯ ಮಾತನ್ನು ಹೇಳುವ ಸಂಭವವಿದೆ.

*ಮದಿಸಿದ ಆನೆಯ ಮಲಗಿದ ಹಾವಿನ*
*ಮದಿರೆಯ ಕುಡಿದು ಬರುವೋನ – ಕಂಡರೆ*
*ಹರಿದಾರಿ ಬಿಟ್ಟು ಹರಿದೋಡು.*

ದುಷ್ಟರನ್ನು ಕಂಡರೆ ದೂರವಿರು ಎಂಬ ಗಾದೆಯಿದೆ. ಅನಿಷ್ಟವನ್ನು ಕಂಡಾಗ ಮೈಮೇಲೆ ಹಾಕಿಕೊಂಡು ಸುಧಾರಿಸುವುದು ಎಲ್ಲರಿಗೂ ಎಲ್ಲಾ ಸಂದರ್ಭದಲ್ಲೂ ಸಾಧ್ಯವಿಲ್ಲ. ಅಂಥದ್ದರಿಂದ ಉಪಾಯವಾಗಿ ದೂರವಿರುವುದೇ ಕ್ಷೇಮ. ಮದಿಸಿದ ಆನೆಯನ್ನು ಎದುರಿಸುವುದಕ್ಕೆ ಹೆಣ್ಣಿನಿಂದ ಸಾಧ್ಯವಿಲ್ಲ. ಹಾವು ಮಲಗಿದೆಯೆದು ಹತ್ತಿರಕ್ಕೆ ಹೋಗುವುದೂ ಅಪಾಯ. ಮದ್ಯಪಾನ ಮಾಡಿದವನೂ ಅಪಾಯಕಾರಿ. ಅನಾಹುತ ಸಂಭವಿಸುವ ಪ್ರಾಣಿಗಳು ಕಂಡಾಗ ದೂರಸರಿಯುವುದೇ ಸಾಧುವಾದ ಮಾರ್ಗ. ತಿಳಿದೂ ತಿಳಿದೂ ಅಪಾಯಗಳಿಗೆ ತುತ್ತಾಗಬಾರದು. ಹೆಣ್ಣು ಗಂಡಿಗೆಲ್ಲ ಇಂತಹ ಎಚ್ಚರಿಕೆಯ ಮಾತು ಬೇಕು.

*ಬಾಳೆಯ ಕಡಿದಾರೆ ತೋಟ ಹಾಳಾಗಬಲ್ಲದೇ*
*ಬಾಳೀಸಲಾರದೆ ಮಡದೀಯ – ಬಿಟ್ಟರೆ*
*ಬಾಳೆ ಹಣ್ಣೇನೆ ಕೊಳಿಯಾಕೆ?*

ಜನಪದ ಗೃಹಿಣಿಯರು ಕಷ್ಟವೋ ಸುಖವೋ ಪರಿಸ್ಥಿತಿಗೆ ಹೊಂದಿಕೊಂಡು, ಸಮಸ್ಯೆಯೊಂದಿಗೆ ರಾಜಿಮಾಡಿಕೊಂಡು ಬದುಕುವುದೇ ಹೆಚ್ಚು. ಅಪರೂಪಕ್ಕೊಬ್ಬಳು ಅಲ್ಲಲ್ಲಿ ಪ್ರತಿಭಟಿಸುವುದೂ ಉಂಟು. ಅಂಥ ಒಂದು ಉದಾಹರಣೆ ಇಲ್ಲಿದೆ.

ನಮ್ಮಲ್ಲಿ ಕೈಹಿಡಿದ ಹೆಂಡತಿಗೆ ತೊಂದರೆ ಕೊಡುವ ಗಂಡಂದಿರಿಗೂ ಕೊರತೆಯಿಲ್ಲ. ತನ್ನ ದೌರ್ಬಲ್ಯದಿಂದ ಹೆಂಡತಿಯನ್ನು ಬಾಳಿಸಲಾರದೆ ಬಿಟ್ಟುಬಿಡುವವರೂ ಇದ್ದಾರೆ. ಅಂಥ ಗಂಡನಿಗೆ ಹೆಣ್ಣು ಮಾರ್ಮಿಕವಾಗಿ ಪ್ರಶ್ನಿಸುತ್ತಾಳೆ. ಬಾಳೆಯ ತೋಟದಲ್ಲಿ ಒಂದು ಬಾಳೆಯ ಗೊನೆಯನ್ನೋ ಒಂದು ಬಾಳೆಯ ಗಿಡವನ್ನೋ ಕಡಿದುಹಾಕಿದರೆ ಇಡೀ ತೋಟವೇನೂ ಹಾಳಾಗುವುದಿಲ್ಲ. ಒಂದು ಹೋದರೂ ಪಕ್ಕದಲ್ಲಿ ಇನ್ನೊಂದು ದಸಿ ಮೊಳಕೆಯೊಡೆಯುತ್ತದೆ. ಹೆಣ್ಣೂ ಹಾಗೆಯೇ. ಒಬ್ಬ ಗಂಡಸು ಬಾಳಿಸಲಾರದೆ ಬಿಟ್ಟರೆ ಮತ್ತೊಬ್ಬನನ್ನು ಪಡೆಯುವ ಛಲ ಅವಳಲ್ಲಿದೆ. ಬಾಳೆಯ ಹಣ್ಣಿನ ಹಾಗೆ ಅವಳೇನೂ ಕೊಳೆತುಹೋಗುವುದಿಲ್ಲ.

ಬ್ರಾಹ್ಮಣೇತರರಲ್ಲಿ ಪುನರ್ವಿವಾಹಕ್ಕೆ ಅವಕಾಶವಿರುವ ಧೈರ್ಯವೂ ಅವಳಿಗಿದೆ.

ಪುರುಷ ಪ್ರಧಾನ ಹಿನ್ನೆಲೆಯಲ್ಲಿದ್ದರೂ ಈ ಹೆಣ್ಣು ಪುರುಷ ಪ್ರಜ್ಞೆಗೆ ಸವಾಲೆಸೆಯುವ ದಿಟ್ಟತನವನ್ನು ತೋರಿದ್ದಾಳೆ. ಜನಪದ ಸ್ತ್ರೀಯ ಮತ್ತೊಂದು ಮುಖ ಇಲ್ಲಿ ಅನಾವರಣವಾಗಿದೆ.

*ಮಲ್ಲಿಗೆ ಹೂವ ಮುಡಿದು ನಿಲ್ಲದಿರು ಓಣ್ಯಾಗೆ*
*ನಲ್ಲರ ಕಣ್ಣು ನಿನ ಮೇಲೆ – ಬಿದ್ದರೆ*
*ಒಲ್ಲಾರು ಮನೆಯ ಒಗೆತನ.*

ಮಹಿಳೆ ಅಲಂಕಾರಪ್ರಿಯೆ. ಮಲ್ಲಿಗೆ ಹೂವಿಗೆ ಮರುಳಾಗದ ಮಹಿಳೆಯಿಲ್ಲ. ಎಂಥ ಬಡವಿಯಾದರೂ ಪ್ರತಿನಿತ್ಯ ಹೊಸ ಹೂವು ಮುಡಿದುಕೊಳ್ಳಲು ಬಯಸುತ್ತಾಳೆ. ಸ್ತ್ರೀಯ ಸೌಂದರ್ಯವೃದ್ಧಿಗೆ ಮಲ್ಲಿಗೆಯ ಹೂವು ಕಾರಣವಾಗುತ್ತದೆ. ಅಲಂಕಾರ ಮಾಡಿಕೊಳ್ಳುವುದು ಸ್ವಸಂತೋಷಕ್ಕಾದರೆ ಅಡ್ಡಿಯಿಲ್ಲ. ಆದರೆ ಅದು ಅನ್ಯ ಪುರುಷನ ಚಾಂಚಲ್ಯಕ್ಕೆ ಕಾರಣವಾಗಬಾರದು. ಲಕ್ಷಣವಾದ ಹೆಣ್ಣು ಅಲಂಕಾರ ಮಾಡಿಕೊಂಡು ಬೀದಿಯಲ್ಲಿ ನಿಂತರೆ, ನಲ್ಲರ ಕಣ್ಣು ಅವಳ ಮೇಲೆ ಬೀಳುತ್ತದೆ. ಅನ್ಯ ಮಹಿಳೆಗೆ ಮರುಳಾದ ಗಂಡಸಿನ ಸಂಸಾರ ಕೆಡುತ್ತದೆ. ಹೆಣ್ಣಾದವಳು ಅದಕ್ಕೆ ಅವಕಾಶ ಕೊಡಕೂಡದು. ಅಂದರೆ ಸಂಸಾರದಲ್ಲಿ ಹೆಣ್ಣು ತಾನೂ ಕೆಡಬಾರದು, ಇತರರನ್ನೂ ಕೆಡಿಸಬಾರದು.

ಹೆಣ್ಣಿಗೆ ಪ್ರಿಯವಾದ ಮಲ್ಲಿಗೆ ಹೂವಿನ ನೆಪದಲ್ಲಿ ಈ ನೀತಿ ತ್ರಿಪದಿ ಹುಟ್ಟಿದೆ. ಹಿಂದೆ ಗಂಡಸರೂ ತಲೆಯತುಂಬ ಮಲ್ಲಿಗೆ ಹೂ ಮುಡಿದುಕೊಳ್ಳುತ್ತಿದ್ದುದನ್ನು ಜನಪದ ಗೀತೆಯಲ್ಲಿ ದಾಖಲಿಸಿದೆ. ಕನ್ನಡ ನಾಡಿನ ವಿಶೇಷವಾದ ಮಲ್ಲಿಗೆ ಹೂವು ಸ್ತ್ರೀ ಪುರುಷರಿಬ್ಬರಿಗೂ ಪ್ರಿಯ. ಮಲ್ಲಿಗೆ ಹೂ ಎಂದರೆ ಮನುಷ್ಯನಿಗೂ ಇಷ್ಟ, ಮಹಾದೇವನಿಗೂ ಇಷ್ಟ. ಅದರ ಅಂದಚಂದ, ಅಸಾಧಾರಣ ಪರಿಮಳಕ್ಕೆ ಎಂಥವರಾದರೂ ಮಾರುಹೋಗುತ್ತಾರೆ.

*ಮಲ್ಲಿಗೆ ಇದ್ದಹಾಗೆ ಮುಳ್ಯಾಕೆ ಮುಡಿಯುವೆ*
*ಕಲ್ಯಾಣದಯ್ಯ ಬಸವಯ್ಯ – ಇರುವಾಗ*
*ಕಲ್ಲಿಗ್ಯಾಕೆ ಕೈಯ ಮುಗಿಯುವೆ.*

ಮಲ್ಲಿಗೆ ಹೂವನ್ನು ಸಾಂಕೇತಿಕವಾಗಿಯೂ ಜನಪದರು ಬಳಸಿದ್ದಾರೆ. ಒಳ್ಳೆಯದು ಇದ್ದಾಗ ಕೆಟ್ಟದನ್ನು ಬಯಸಬಾರದೆಂಬ ಹಿತೋಕ್ತಿ ಹೇಳಲು ಇಲ್ಲಿ ಪ್ರಯತ್ನಿಸಿದೆ. ಸುಗಂಧಭರಿತವಾದ ಅಂದವಾದ ಮಲ್ಲಿಗೆಯ ಹೂವು ಇರುವಾಗ, ಮುಳ್ಳನ್ನು ಮುಳ್ಳಿನಿಂದ ಕೂಡಿದ ಅನಾಕರ್ಷಕವಾದ ಸುಗಂಧ ರಹಿತವಾದ ಹೂವನ್ನು ಬಯಸಬಾರದು, ಮುಡಿಯಬಾರದು. ಭೂಕೈಲಾಸವಾದ ಕಲ್ಯಾಣ ಕ್ಷೇತ್ರದ ಜಗಜ್ಯೋತಿ ಬಸವೇಶ್ವರನಿಗೆ ಪೂಜೆ ಮಾಡಿ ಕೈಮುಗಿಯಬೇಕೇ ಹೊರತು ನಿಷ್ಪ್ರಯೋಜಕವಾದ ಕಲ್ಲಿಗೆ ಪೂಜೆ ಸಲ್ಲಿಸಬಾರದು. ಹಾಗೆ ಮಾಡಿದರೆ ಅದು ವ್ಯರ್ಥವಾಗುತ್ತದೆ. ಇಲ್ಲಿ ಯುಗಪುರುಷ ಕ್ರಾಂತಿಕಾರಿ ಬಸವಣ್ಣನ ಮಹತ್ವವನ್ನೂ ಏಕದೇವೋಪಾಸನೆಯ ಹಿರಿಮೆಯನ್ನೂ ಪ್ರಸ್ತಾಪಿಸಿದೆ. ಸಂಸಾರಿಗೆ ಧಾರ್ಮಿಕ ಶ್ರದ್ಧೆಯೂ ಅಗತ್ಯವೆಂಬ ತತ್ವವನ್ನು ಹೇಳಿದೆ. ಧಾರ್ಮಿಕ ಶ್ರದ್ಧೆ ಮಾನಸಿಕ ನೆಮ್ಮದಿಗೆ ಅಗತ್ಯವೆಂಬುದು ಜನಪದ ನಂಬಿಕೆ. ಕಲ್ಯಾಣದ ಬಸವಣ್ಣನ ಪ್ರಭಾವ ಈ ಹಾಡಿನ ಹುಟ್ಟಿಗೆ ಕಾರಣವಾಗಿದೆ. ಗಂಡನನ್ನು ಉದಾತ್ತಗುಣದ ಬಸವಣ್ಣನಿಗೂ ಇತರ ಗಂಡಸರನ್ನು ಕಲ್ಲು ಮುಳ್ಳುಗಳಿಗೂ ಹೋಲಿಸಿರುವುದು ವೈಚಾರಿಕವಾಗಿದೆ.

*ಸವತಿ ಸಣ್ಣವಳಲ್ಲ ದಾಯಾದಿ ಹಿತವಲ್ಲ*
*ಕಚ್ಚು ಹಾವು ಮರಿಯಲ್ಲ – ತವರ್ಮನೆಗೆ*
*ಜರೆದು ಹೋಗುವಳು ಮಗಳಲ್ಲ.*

ಹೆಂಡತಿಗೆ ಮಕ್ಕಳಿಲ್ಲವೆಂದೋ ಹೆಂಡತಿ ರೋಗಿಷ್ಠೆಯೆಂದೋ ಗಂಡನ ದೌರ್ಬಲ್ಯದಿಂದಲೋ ಗಂಡ ಇನ್ನೊಬ್ಬಳು ಹೆಂಡತಿಯನ್ನು ತಂದರೆ ಮೊದಲ ಹೆಂಡತಿಗೆ ಗೋಳು ತಪ್ಪಿದ್ದಲ್ಲ. ಕಿರಿಯ ಹೆಂಡತಿಯ ಮುಂದೆ ಹಿರಿಯ ಹೆಂಡತಿ ಸದರ. ಗಂಡನ ಆಸ್ತಿಯಲ್ಲಿ ಪಾಲುಪಡೆಯುವ ರಕ್ತಸಂಬಂಧಿಗಳು ಸದಾ ಕಿರಿಕಿರಿ ಉಂಟುಮಾಡುತ್ತಿರುತ್ತಾರೆ.

ಮರಿಯಾದರೂ ಹಾವು ಕಚ್ಚುವುದನ್ನು ಬಿಡುವುದಿಲ್ಲ. ಅದು ಚಿಕ್ಕದೆಂದು ನಿರ್ಲಕ್ಷಿಸುವಂತಿಲ್ಲ. ಇವುಗಳ ಬಗೆಗೆ ಯಾರಾದರೂ ಎಚ್ಚರಿಕೆಯಿಂದಿರಬೇಕು. ಎಷ್ಟೇ ಕೊಟ್ಟರೂ ತೌರನ್ನು ಹಂಗಿಸುವವಳು ಮಗಳಾಗುವುದಿಲ್ಲ.

ರಾಮಾಯಣ ಮಹಾಕಾವ್ಯದಲ್ಲಿ ಸವತಿ ಮಾತ್ಸರ್ಯವಿದೆ. ಸವತಿಯ ಸಮಸ್ಯೆ, ದಾಯಾದಿಗಳ ಕಲಹ ನಮ್ಮಲ್ಲಿ ಹಳೆಯದು.

ತೌರಿನವರ ಅಂತರಂಗದ ಆಶಯವೂ ಈ ಹಾಡಿನಲ್ಲಿ ಅನಾವರಣವಾಗಿದೆ. ಸೂತ್ರಪ್ರಾಯವಾಗಿ ತೀರ್ಮಾನ ಕೊಟ್ಟಿರುವುದು ಈ ಸೂಕ್ತಿಯ ಹೆಚ್ಚುಗಾರಿಕೆಯಾಗಿದೆ. ತೌರನ್ನು ತೊರೆದರೂ ಹೆಣ್ಣು ತೌರನ್ನು ದೂರಮಾಡಿಕೊಳ್ಳಬಾರದು. ತೌರಿನ ಸಂಬಂಧ ಸುಲಭವಾಗಿ ಕಳೆದುಕೊಳ್ಳುವಂಥದ್ದಲ್ಲ.

*ಕೊಟ್ಟು ಕುದಿಯಬೇಡ ಮಾಡಿ ಹಂಗಿಸಬೇಡ*
*ಇಷ್ಟುಂಡರೆಂದು ಅನಬೇಡ – ಮೂರು ಮಾತು*
*ಮುಟ್ಟುವುದು ಶಿವನ ಬಳಿಯಲ್ಲಿ.*

ಹೆಣ್ಣಿಗೆ ಹೃದಯವೈಶಾಲ್ಯ ಮುಖ್ಯ. ಅವಳು ಗೃಹಿಣಿಯಾದ್ದರಿಂದ ಹಲವು ವಿಷಯಗಳಲ್ಲಿ ಉದಾರವಾಗಿ ನಡೆದುಕೊಳ್ಳಬೇಕಾಗುತ್ತದೆ. ಮನೆಗೆ ಬೇಡಿ ಬಂದವರಿಗೆ ದಾನ ಧರ್ಮ ಮಾಡಬೇಕಾಗುತ್ತದೆ. ಭಿಕ್ಷೆಗಾಗಿ ಬರುವವರು, 'ತಾಯೀ' ಎಂದೇ ಮೊದಲು ಸಂಬೋಧಿಸುವುದು. ಸಂಸಾರದ ಇತರರಿಗೆ, ಸಂಬಂಧಿಕರಿಗೆ ಅದೂ ಇದೂ ಕೊಡಬೇಕಾಗುತ್ತದೆ. ಮಾಡುವುದನ್ನೆಲ್ಲಾ ಮಾಡಿ ಕೋಪದಿಂದ ಕೆರಳಬಾರದು. ಅದನ್ನು ದೂರಲೂ ಬಾರದು. ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ತಿಳಿಯದಂತಿರಬೇಕು. ಕೊಡುವಾಗ ಇರುವ ನಿರಾಳ ಮನಸ್ಸು ಅನಂತರ ಕೆಡಬಾರದು. ಸ್ವಂತ ಮಕ್ಕಳು, ಗಂಡ, ಮನೆಯವರಿಗೆ ಹೊಟ್ಟೆತುಂಬ ಉಣಬಡಿಸಬೇಕು. ಉಂಡ ಪ್ರಮಾಣವನ್ನು ಎತ್ತಿ ಆಡಬಾರದು. ಅದು ಸಂಸ್ಕೃತಿಯಲ್ಲ. ಇಂಥ ಕ್ರಿಯೆಗಳನ್ನೆಲ್ಲ ಅವ್ಯಕ್ತಶಕ್ತಿಯಾದ ದೇವರು ಕಣ್ಣಾರೆ ನೋಡುತ್ತಿರುತ್ತಾನೆ; ತಪ್ಪಿಗೆ ಶಿಕ್ಷೆ

ನೀಡುತ್ತಾನೆ. ಶಿವನಿಗೆ ಒಪ್ಪಿಗೆಯಾಗುವಂತೆ ಒಗತನ ಮಾಡುವುದು ಶ್ರೇಯಸ್ಕರ. ಕಾಣದ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಒಪ್ಪವಾಗಿ ಬದುಕುಮಾಡುವ ಕಡೆಗೆ ಜನಪದ ಮನಸ್ಸು ತುಡಿದಿದೆ.

*ನಿದ್ದೆಗೆ ಮುಟ್ಟುಂಟೆ? ಬುದ್ಧಿಗೆ ಕೇಡುಂಟೆ?*
*ವಿದ್ಯೆ ಬಲ್ಲವಗೆ ಭಯವುಂಟೆ – ದೇವರೆ*
*ಮದ್ದುಂಟೆ ಜನನ ಮರಣಕ್ಕೆ ?*

ಜನಪದ ಲೋಕಾನುಭವ ಖಚಿತವಾದದ್ದು; ಸಾರ್ವತ್ರಿಕವಾದದ್ದು; ಸಮಸ್ತರಿಗೂ ಅನ್ವಯಿಸುವಂತದ್ದು. ಇದನ್ನು ಅರಿತು ಜೀವನ ಮಾಡುವುದು ಸೂಕ್ತ. ಹೆಚ್ಚು ನಿದ್ದೆ ಮಾಡುವುದಕ್ಕಾಗಲೀ ಕಡಮೆ ನಿದ್ದೆ ಮಾಡುವುದಕ್ಕಾಗಲೀ ನಿದ್ದೆ ಮಾಡದೇ ಇರುವುದಕ್ಕಾಗಲೀ ಔಷಧಿಯಿಲ್ಲ. ಔಷಧಿ ಇದ್ದರೂ ಅದು ತಾತ್ಕಾಲಿಕ ಉಪಶಮನ, ಅಷ್ಟೆ. ಆಯಾ ದೇಹಕ್ಕೆ ಒಗ್ಗುವ ಸಹಜವಾದ ನಿದೆಯೇ ಶ್ರೇಷ್ಠ. ಬುದ್ಧಿಗೆ ಕೇಡಿಲ್ಲ. ದುರ್ಬುದ್ಧಿಗೆ ಕೇಡಿರಬಹುದು ಅಷ್ಟೆ. ಬುದ್ಧಿಮಾತನ್ನು ಹೇಳುವುದರಿಂದಾಗಲೀ ಕೇಳುವುದರಿಂದಾಗಲೀ ಖಂಡಿತ ಅಪಾಯವಿಲ್ಲ. ಮನುಷ್ಯನಲ್ಲಿ 'ಬುದ್ಧಿ' ಎನ್ನುವುದು ಇರುವುದರಿಂದಲೇ ಇಷ್ಟೆಲ್ಲಾ ಪ್ರಗತಿ ಸಾಧ್ಯವಾಗಿರುವುದು; ಪ್ರಾಣಿಸಂಕುಲಕ್ಕಿಂತ ಭಿನ್ನವಾಗಿ ವಿಕಾಸವಾಗಿರುವುದು. ಜೀವಕೋಟಿಯ ಹುಟ್ಟು ಸಾವಿಗೂ ಔಷಧಿಯಿಲ್ಲ. ಆಧುನಿಕ ವಿಜ್ಞಾನದಿಂದ ತಾತ್ಕಾಲಿಕವಾಗಿ ಜನನ ಮನರಣವನ್ನು ಮುಂದೂಡಬಹುದಾದರೂ ಅದಕ್ಕೆ ಶಾಶ್ವತ ಪರಿಹಾರವಿಲ್ಲ. ಜನನವನ್ನು ತಡೆಗಟ್ಟಬಹುದಾದರೂ ಮರಣವನ್ನು ತಡೆಗಟ್ಟುವುದು ಸಾಧ್ಯವಿಲ್ಲ. ಅಂಥ ಕಾಲ ಬಂದಾಗ ಜಗತ್ತಿನ ಸ್ಥಿತಿ ಬೇರೆಯೇ ಆಗುತ್ತದೆ. ಜೀವನ ಶಾಶ್ವತವಲ್ಲ; ಸಾವು ಮಾತ್ರ ಶಾಶ್ವತ. ಚಿಕ್ಕ ತ್ರಿಪದಿಯಲ್ಲಿ ದೊಡ್ಡ ಅರ್ಥ ಪ್ರಾಪ್ತಿ.

*ಹೆಣ್ಣಿನ ಕಾಯವ ಮಣ್ಣು ಮಾಡಲಿ ಬೇಕ*
*ಸುಣ್ಣದ ಹಳ್ಳಾಗಿ ಸುಡಬೇಕ – ಈ ಜಲುಮ*
*ಮಣ್ಣು ಮಾಡಿ ಮರ್ತ್ಯವ ಗೆದಿಬೇಕ.*

ಪಾರ್ವತಿಯನ್ನು ಭೂಮಿಯ ಪ್ರತೀಕವೆನ್ನುತ್ತಾರೆ. ಹೆಣ್ಣಿನ ಸಹನೆಯನ್ನು ಭೂಮಿಗೆ ಹೋಲಿಸುವುದುಂಟು. ಜನಪದ ಹೆಣ್ಣಿಗೆ ಭೂಮಿ ಸಾಕ್ಷಾತ್ ದೇವರು. ಜನಪದ ಹೆಣ್ಣಿಗೂ ದುಡಿಮೆಗೂ ನಂಟು. ದಿನವಿಡೀ ದುಡಿಯದೆ ಅವಳ ಬಾಳು ಸಾಗುವಂತಿಲ್ಲ. ಮನೆಯ ಒಳಗೂ ಹೊರಗೂ ದುಡಿಯುವುದು ಅವಳಿಗೆ ಅನಿವಾರ್ಯವಾಗಿದೆ. ದುಡಿದೇ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ತತ್ವ ಅವಳಿಗೆ ರಕ್ತಗತವಾಗಿದೆ. ದೇಹ ಮುಗ್ಗಾಗುವವರೆಗೂ ದುಡಿಯಲು ಅವಳು ಹಿಂಜರಿಯುವುದೂ ಇಲ್ಲ. ಮಣ್ಣಿನಲ್ಲಿ ಮಣ್ಣಾಗಿ ದುಡಿಯುವುದು ಅವಳ ಜಾಯಮಾನವೇ ಆಗಿದೆ. ಸುಣ್ಣದ ಹರಳು ನೀರಿನೊಡನೆ ಬೆರೆತು ಕೊತಕೊತ ಕುದಿಯುವ ಹಾಗೆ ಜನಪದ ಮಹಿಳೆ ಬದುಕಿನಲ್ಲಿ ಕುದಿಯುತ್ತಾಳೆ, ಹೆಣಗುತ್ತಾಳೆ. ನರಜನ್ಮವನ್ನು ಮಣ್ಣುಮಾಡಿ ಮರ್ತ್ಯವನ್ನು ಗೆಲ್ಲಬೇಕೆಂಬ ಹಿರಿಯರ ನೀತಿಮಾತನ್ನು ಶಿರಸಾವಹಿಸಿ ಪರಿಪಾಲಿಸುತ್ತಾಳೆ. ಸುಣ್ಣದ ಹರಳಿನಂತೆ ಸುಟ್ಟುಕೊಳ್ಳಬೇಕೆಂಬ ಪ್ರತಿಮೆ ಮಾರ್ಮಿಕವಾಗಿದೆ. ಅಭಿವ್ಯಕ್ತಿ ತೀವ್ರವಾಗಿದೆ.

*ಸಂಸಾರವೆಂಬುದೇ ಸಾಗರ ಹೊಳೆಯವ್ವ*
*ಈಸಬಲ್ಲವಗ ಎದೆಯುದ್ದ – ಗಿಳಿರಾಮ*
*ಓದಬಲ್ಲವಗೆ ಕೈಲಾಸ.*

ಸಂಸಾರವೆಂಬುದು ಸುಲಭವೆಂದು ಜನಪದರು ನಂಬಿಲ್ಲ. ಅದು ಸಾಗರವಂತೆ. ಸಾಗರದ ಅಡಿ ಆಳ ಉದ್ದ ಅಗಲವನ್ನು ಯಾರು ಬಲ್ಲರು? ಹಾಗೆಯೇ ಸಂಸಾರದ ಇತಿಮಿತಿಯನ್ನು ಅರಿಯುವುದು ಸುಲಭವಲ್ಲ. ಸಾಗರ ಎಷ್ಟೇ ಆಳವಾಗಿದ್ದರೂ ಈಜುಬಲ್ಲವನಿಗೆ ಅದು ಎದೆಯುದ್ದದಷ್ಟೇ ಸಲೀಸು. ಸಂಸಾರದ ಮರ್ಮವನ್ನು ಅರಿತು ಜಾಣ್ಮೆಯಿಂದ ನಡೆದುಕೊಳ್ಳುವವನಿಗೆ ಸಂಸಾರಸಾಗರ ಸಲೀಸು. ಸಂಸಾರದ ಅಂತರಂಗವನ್ನು ಓದಿ ತಿಳಿದುಕೊಳ್ಳುವವನಿಗೆ ಸಂಸಾರ ಕೈಲಾಸವಾಗಿ ಸಂತೋಷವನ್ನು ಉಂಟುಮಾಡುತ್ತದೆ. ಇಲ್ಲದಿದ್ದರೆ

ನರಕಸದೃಶ್ಯವಾಗುತ್ತದೆ. ಈಜು ಬಲ್ಲವನಿಗೆ ಸಾಗರವಾದರೂ ಭಯವಿಲ್ಲ; ಜೀವನ ವಿಧಾನ ಬಲ್ಲವನಿಗೆ ಸಂಸಾರವಾದರೂ ಭಯವಿಲ್ಲ. ಈಜು ಬಲ್ಲವನು ಸಾಗರವನ್ನು ದಾಟುವಂತೆ, ವಿವೇಕಿಯಾದವನು ಸಂಸಾರಸಾಗರವನ್ನು ದಾಟಬೇಕು. ಆಗಲೇ ಹುಟ್ಟಿದ್ದಕ್ಕೆ ಸಾರ್ಥಕವಾಗುವುದು.

ಈ ಜನಪದ ತ್ರಿಪದಿಗೆ ಪೂರಕವಾಗಿ ಬಸವಣ್ಣನ ವಚನವನ್ನು ಮನನಮಾಡಬಹುದು:

*ಕಾಲಲಿ ಕಟ್ಟಿದ ಗುಂಡು*
*ಕೊರಳಲ್ಲಿ ಕಟ್ಟಿದ ಬೆಂಡು*
*ತೇಲಲೀಯದು ಗುಂಡು*
*ಮುಳುಗಲೀಯದು ಬೆಂಡು.*

ಸಂಸಾರವನ್ನು ಸಾಗರಕ್ಕೆ ಹೋಲಿಸಿರುವ ಜನಪದರ ಲೋಕಾನುಭವ ಅನನ್ಯವಾದದ್ದು.

*ಸಂಸಾರ ದಂದುಗ ಹಿಂಗದೊ ಶಿವರಾಯ*
*ಹಿಂಗುದಕ ಶರಣರ ಹಾದಿ – ಹಿಡಕೊಂಡು*
*ಗೆದಿಬೇಕ ಇದ್ದು ಸಂಸಾರ.*

ಸಂಸಾರವೆಂದಮೇಲೆ ಕಷ್ಟ, ತೊಂದರೆ ಇದ್ದದ್ದೇ. ಯಾರ ಸಂಸಾರವೂ ಸಂಪೂರ್ಣವಾಗಿ ಸುಖವಾಗಿರುವುದಿಲ್ಲ ಅಥವಾ ದುಃಖಮಯವಾಗಿರುವುದಿಲ್ಲ. ಸಂಸಾರದಲ್ಲಿ ಬಂದೊದಗುವ ಕಷ್ಟ ಪರಂಪರೆ ಹಿಂಗಬೇಕಾದರೆ, ಶರಣರಮಾರ್ಗ ಹಿಡಿಯಬೇಕು; ಆ ಮೂಳಕ ಸಂಸಾರವನ್ನು ಗೆಲ್ಲಬೇಕು ಎಂದಿದ್ದಾರೆ ಜನಪದರು. ಸರಳವಾಗಿ ಸುಖಮಯವಾಗಿ ಸಂಸಾರಸಾಗಿಸುವ ಶರಣರ ಬಗೆಗೆ ಇನ್ನಿಲ್ಲದ ಭರವಸೆ ಹಳ್ಳಿಗರಿಗೆ. ಶರಣರ ಸಂಸಾರಮಾರ್ಗ ಅನುಕರಣೀಯ ಎಂಬುದೂ ಗಮನಾರ್ಹ.

ಈಸಬೇಕು ಇದ್ದು ಜೈಸಬೇಕು ಎಂಬ ದಾಸರ ಕೀರ್ತನೆಯ ಸಂದೇಶವೂ ಇದೇ ಆಗಿದೆಯಲ್ಲವೇ? ಜೀವನಪರವಾದ ಜನಪದ ಮನಸ್ಸು ಪಲಾಯನವಾದವನ್ನು ಒಪ್ಪುವುದಿಲ್ಲ.

*ಗಂಡನ ಗುಣವನ್ನು ಕಂಡೆನೆಂಬೋಳು ಜಾಣೆ*
*ಹಿಂಡೆತ್ತಿನೊಳಗೆ ಬಸವನ – ಪಾದವ*
*ಕಂಡೆನೆಂಬೋಳು ಕಡುಜಾಣೆ*

ಆದರ್ಶ ದಾಂಪತ್ಯದಲ್ಲಿ ಸತಿಪತಿಯರು ಪರಸ್ಪರ ಅರಿತುಕೊಂಡು ಬಾಳುವೆ ನಡೆಸಬೇಕು. ಸಮರಸದ ಸಂಸಾರದಲ್ಲಿ ವಿರಸ ಮನೋಭಾವ ಅಪೇಕ್ಷಣೀಯವಲ್ಲ. ಗಂಡನ ಗುಣವನ್ನು ಕಂಡು ಬಾಳುವವಳು ಜಾಣೆಯಾಗುತ್ತಾಳೆ. ಹಿಂಡು ಎತ್ತುಗಳ ನಡುವೆ ದೇವರಿಗೆ ಪ್ರಿಯವಾಗುವ ಬಸವನ ಪಾದವನ್ನು ದರ್ಶಿಸುವವಳು ಕಡು ಜಾಣೆಯಾಗುತ್ತಾಳೆ. ಎಷ್ಟೆಲ್ಲಾ ಜನ ಗಂಡಸರಿದ್ದರೂ ಅವರ ಪೈಕಿ ತನ್ನ ಗಂಡ ಮಾತ್ರ ಆದರ್ಶಪ್ರಾಯನಾಗುತ್ತಾನೆ. ಎಷ್ಟೋ ದನಗಳ ನಡುವೆ ಇರುವ ಬಸವ ಮಾತ್ರ ಶಿವದರ್ಶನಕ್ಕೆ ಕಾರಣವಾಗುತ್ತದೆ. ಗಂಡನ ವಿಷಯದಲ್ಲಾಗಲೀ ದೇವರ ವಿಷಯದಲ್ಲಾಗಲೀ ಒಳಿತು ಕೆಡಕನ್ನು ಸಮದರ್ಶಿಯಾಗಿ ಕಂಡುಕೊಳ್ಳುವ ಹೆಣ್ಣು ಸದ್ಗೃಹಿಣಿಯಾಗಲು ಅರ್ಹಳಾಗುತ್ತಾಳೆ. ಗಂಡನನ್ನು ದೇವರ ಸದೃಶವಾದ ನಂದಿ ಬಸವನಿಗೂ ಜನರನ್ನು ಎತ್ತುಗಳಿಗೂ ಹೋಲಿಸಿರುವುದು ಮನನೀಯವಾಗಿದೆ. ಹಿಂಡು ಮಂದಿಯಲ್ಲಿ ತನ್ನ ಹೆತ್ತ ತಾಯಿಯನ್ನು ಗುರುತಿಸುವ ಮಗುವಿನಂತೆ, ಜನಸಮೂಹದಲ್ಲಿ ಗರತಿಯಾದವಳು ತನ್ನ ಗಂಡನನ್ನು ಗುರುತಿಸಬಲ್ಲಳು. ಪ್ರಾಣಿ ಜಾತಿ ಒಂದೇ ಆದರೂ ಬಸವ ಹಾಗೂ ಎತ್ತು ಒಂದೇ ಅಲ್ಲ; ಹಾಗೆಯೇ ಗಂಡ ಹಾಗೂ ಅನ್ಯಪುರುಷ ಒಂದೇ ಅಲ್ಲ.

*ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ*
*ಮಗಳೇ ಮನಶುದ್ಧಳಾಗಿ*
*ಗಂಡನೊಡನೆ ನೀ ಬಾಳಬೇಕಮ್ಮ.*

*ಅತ್ತೆ ಮಾವಗಂಜಿಕೊಂಡು ನಡೆಯಬೇಕಮ್ಮ*
*ಚಿತ್ತದಲ್ಲಿಭವನಕ್ಕರೆಯ ಪಡೆಯಬೇಕಮ್ಮ*
*ಹೊತ್ತುಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ*
*ಹತ್ತು ಮಂದಿ ಒಪ್ಪುವಂತೆ ನುಡಿಯಬೇಕಮ್ಮ.*

*ಕೊಟ್ಟು ಕೊಂಬುವ ನೆಂಟರೊಡನೆ ದ್ವೇಷ ಬೇಡಮ್ಮ*
*ಅಟ್ಟು ಉಂಬುವ ಕಾಲದಲಿ ಆಟ ಬೇಡಮ್ಮ*
*ಹಟ್ಟಿ ಬಾಗಿಲಲ್ಲಿ ಬಂದು ನಿಲ್ಲಬೇಡಮ್ಮ*
*ಕಟ್ಟಿ ಆಳುವ ಗಂಡನೊಡನೆ ಕೋಪಬೇಡಮ್ಮ.*

*ನೆರೆ ಹೊರೆಯವರಿಗೆ ನ್ಯಾಯವನ್ನು ಹೇಳಬೇಡಮ್ಮ*
*ಗರುವ ಕೋಪ ಮತ್ಸರವನ್ನು ಮಾಡಬೇಡಮ್ಮ*
*ಪರರ ನಿಂದಿಪ ಹೆಂಗಳೊಡನೆ ಸೇರಬೇಡಮ್ಮ*
*ಗುರು ಮಾದೇಶ್ವರನ ಸ್ಮರಣೆ ಮರೆಯಬೇಡಮ್ಮ.*

ಆಗತಾನೆ ಮದುವೆಯಾಗಿ ಗಂಡನ ಮನೆಗೆ ಹೋಗಲಿರುವ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಹುಟ್ಟಿರುವ ಈ ತತ್ವಪದದಲ್ಲಿ ಅತ್ತೆ ಮನೆಯಲ್ಲಿ ಸೊಸೆಯಾದವಳು ಅನುಸರಿಸಬೇಕಾದ ರೀತಿ ನೀತಿಗಳನ್ನು ಸೂಕ್ಷ್ಮವಾಗಿ ವಿವರಿಸುತ್ತದೆ. ಸಂಸಾರಸ್ಥ ಹೆಣ್ಣಿನ ಬಾಳು ಸುಸೂತ್ರವಾಗಿ ಸಾಗಲು ಇಂಥ ನೈತಿಕ ಅರಿವು ಅಗತ್ಯವೆಂದು ಜನಪದರು ನಂಬಿದ್ದಾರೆ.

ಹಿರಿಯರು ಹೇಳುವ ಬುದ್ಧಿಮಾತನ್ನು ಕೇಳಿ, ಮನಸ್ಸು ಶುದ್ಧವಾಗಿ ಗಂಡನೊಡನೆ ಬಾಳುವುದು, ಹೆಣ್ಣಿನ ಯಶಸ್ವೀಬಾಳಿಗೆ ಅನಿವಾರ್ಯವೆಂಬುದು ಮುಖ್ಯ ಸಂದೇಶವಾಗಿದೆ.

ಸೊಸೆಯಾದವಳು ಮನೆಗೆ ಹಿರಿಯರಾದ ಅತ್ತೆಮಾವಂದಿರಿಗೆ ಅಂಜಿ ನಡೆಯಬೇಕು. ದೈವಭಕ್ತಿಯಿಂದ ದೇವರ ಪ್ರೀತಿಗೆ ಪಾತ್ರಳಾಗಬೇಕು. ಹೊತ್ತು ಹೊತ್ತಿಗೆ ಸರಿಯಾಗಿ ಮನೆಗೆಲಸವನ್ನು ನಿರ್ವಹಿಸಬೇಕು. ಹತ್ತು ಮಂದಿ ಒಪ್ಪುವಂತೆ ಮಾತನಾಡಬೇಕು.

ಒಟ್ಟಿನಲ್ಲಿ ನಡೆ ನುಡಿ ಮೆಚ್ಚುವಂತಿರಬೇಕು.

ಕೊಡುಕೊಳೆ ದಿನಬಳಕೆಯಾಗಿರುವ ಬಂಧುಗಳೊಡನೆ ದ್ವೇಷವನ್ನು ಸಾಧಿಸಬಾರದು. ಅಡಿಗೆ ಮಾಡಿ ಊಟಮಾಡುವ ಸಮಯದಲ್ಲಿ ಆಟವಾಡುತ್ತಾ ಕಾಲಕಳೆಯಬಾರದು. ಯಾವ ಕೆಲಸಕ್ಕೆ ಯಾವ ಕಾಲ ಪ್ರಶಸ್ತವೆಂಬುದನ್ನು ತಿಳಿದಿರಬೇಕು. ಅಗತ್ಯವಿರಲಿ ಇಲ್ಲದಿರಲಿ ಮನೆಯ ಮುಂದಿನ ಬಾಗಿಲಿಗೆ ಬಂದು ನಿಲ್ಲಬಾರದು. ಹಾಗೆ ಮಾಡಿ ನೋಡುವವರ ಕಣ್ಣಿಗೆ, ಆಡುವವರ ಬಾಯಿಗೆ ವಸ್ತುವಾಗಬಾರದು. ಹೆಂಡತಿಯ ಯೋಗಕ್ಷೇಮವನ್ನು ನೋಡಿಕೊಳ್ಳುವ ಗಂಡನೊಡನೆ ಕ್ಷುಲ್ಲಕ ವಿಷಯಕ್ಕೆ ಕೋಪಗೊಳ್ಳಬಾರದು. ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕು. ಸಂಸಾರವನ್ನು ಕಟ್ಟಿ ಆಳುವ ಗಂಡನಿಗೆ ಗೌರವಕೊಡಬೇಕು. ಇಲ್ಲದ್ದಿದ್ದರೆ ನಾನಾ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಸಂಸಾರದ ನೆಮ್ಮದಿ ಹಾಳಾಗುತ್ತದೆ.

ಸಂಸಾರಸ್ಥ ಮನೆತನದ ಸೊಸೆ ಅಕ್ಕಪಕ್ಕದವರಿಗೆ ನ್ಯಾಯ ಹೇಳುವ ಅಧಿಕ ಪ್ರಸಂಗತನಕ್ಕೆ ತಲೆಹಾಕಬಾರದು. ಅದರಿಂದ ಒಳ್ಳೆಯದಕ್ಕಿಂತ ಅನಾಹುತವೇ ಸಂಭವಿಸುವುದು ಹೆಚ್ಚು.

ನ್ಯಾಯಗಾರಿಕೆಯನ್ನು ಹಿರಿಯರಿಗೆ ಬಿಟ್ಟುಬಿಡುವುದು ಒಳ್ಳೆಯದು. ಯಾವುದೇ ಕಾರಣಕ್ಕೂ ಉಗ್ರಕೋಪವನ್ನು ಮಾತ್ಸರ್ಯವನ್ನು ರೂಢಿಸಿಕೊಳ್ಳಬಾರದು. ಅನ್ಯರನ್ನು ನಿಂದಿಸಿ ಕಾಲಕಳೆಯುವ ಸ್ತ್ರೀಯರ ಸಹವಾಸವನ್ನು ಮಾಡಬಾರದು. ಅದರಿಂದ ಸಲ್ಲದ ನಿಷ್ಠುರವನ್ನು ಹೊತ್ತುಕೊಳ್ಳಬೇಕಾಗುತ್ತದೆ. ಮಾನಸಿಕ ನೆಮ್ಮದಿಗಾಗಿ ಅವ್ಯಕ್ತ ಶಕ್ತಿಯಾದ ದೇವರ ಸ್ಮರಣೆಯನ್ನು ಮರೆಯಬಾರದು. ಧಾರ್ಮಿಕ ಹಿನ್ನೆಲೆಯಲ್ಲಿ ಸುಖೀಸಂಸಾರವನ್ನು ಅನುಭವಿಸುವ ಕಡೆಗೆ ಸದಾ ಮನಸ್ಸಿರಬೇಕು.

*ಬೇಲಿ ಮೇಗಳ ಹೂವು ಬೆಳ್ಳಗಿದ್ದರೆ ಏನು*
*ಮಲ್ಲಿಗೆ ಹೂನಂಥ ಮನೆ ಗಂಡನ – ಬಿಟ್ಟು*
*ಅನ್ಯ ಪುರುಷನ ಒಲಿಬೇಡ*

ವ್ಯಭಿಚಾರ ಮನುಕುಲಕ್ಕೆ ಅಂಟಿರುವ ಪ್ರಾಚೀನ ಅನಿಷ್ಟ. ನಾನಾ ಕಾರಣಗಳಿಂದ ವ್ಯಭಿಚಾರ ನಮ್ಮ ಸಮಾಜದಲ್ಲಿ ಬೇರುಬಿಟ್ಟಿದೆ. ಇದರ ವಿರುದ್ಧ ಹಲವರು ಹಲವು ರೀತಿಯಲ್ಲಿ ಎಚ್ಚರಿಕೆ ನೀಡಿರುವುದುಂಟು. ವ್ಯಭಿಚಾರದಿಂದ ಅಸಂಖ್ಯಾತ ಸ್ತ್ರೀ ಪುರುಷರ ಚರಿತ್ರೆ ಹಾಳಾಗಿವೆ; ಸಂಸಾರ ಛಿದ್ರವಾಗಿವೆ; ಮನಸ್ಸು ಮುರಿದಿವೆ. ಹೆಣ್ಣಿಗಾಗಲೀ ಗಂಡಿಗಾಗಲೀ ವ್ಯಭಿಚಾರ ಶೋಭೆಯಲ್ಲ. ಗೃಹಿಣಿಯಾದವಳು ಈ ಅನಿಷ್ಟದ ಬಗೆಗೆ ಎಷ್ಟು ಎಚ್ಚರದಿಂದಿದ್ದರೆ ಅಷ್ಟೂ ಒಳ್ಳೆಯದು.

ಹೂವು ಸೌಂದರ್ಯದ ಸಂಕೇತ. ಸುಂದರವದ ವಸ್ತುಗಳನ್ನು ಆಕರ್ಷಿಸುವುದು ಸಹಜ. ಆದರೆ ಅದು ಮರ್ಯಾದೆ ಮೀರಬಾರದು. ಹೆಣ್ಣನ್ನು ಹೂವಿಗೆ ಹೋಲಿಸುವುದುಂಟು. ಹೆಣ್ಣು ಸುಂದರವಾಗಿರುವದು ಅಪೇಕ್ಷಣೀಯ. ಆದರೆ ಅಂಥ ಹೆಣ್ಣು ತನ್ನ ಸೌಂದರ್ಯವನ್ನೇ ಸಾಧನಮಾಡಿಕೊಂಡು ಹೊರಚಾಳಿಗೆ ಇಳಿಯಬಾರದು. ತನ್ನಷ್ಟೇ ಸುಂದರವಾಗಿರುವ ಗಂಡನಿಗೆ ದ್ರೋಹಮಾಡಿ, ಅನ್ಯ ಪುರುಷನನ್ನು ಒಲಿಯಬಾರದು. ಆ ಮೂಲಕ ಸಂಸಾರದ ನೆಮ್ಮದಿಗೆ ಭಂಗ ತರಬಾರದು. ಸೌಂದರ್ಯವತಿಯರೂ ತಾವೂ ಕೆಡಬಾರದು, ಇತರರು ಕೆಡಲೂ ಕಾರಣವಾಗಬಾರದು. ಬೇಲಿ ಹೂವನ್ನು ಅನ್ಯಪುರುಷನಿಗೂ ಮಲ್ಲಿಗೆ ಹೂವನ್ನು ಗಂಡನಿಗೂ ಹೋಲಿಸಿರುವುದು ಅನುಪಮವಾಗಿದೆ.

*ಅಹುದೇಳಿರಣ್ಣ ನೀವು ಇಲ್ಲವೇಳಿರೊ*
*ಬಲ್ಲಂತ ಜಾಣರು ತಿಳಿದ್ಹೇಳಿರೋ.*

*ಮಕ್ಕಳಿಲ್ಲದ ಮನೆ*
*ಮರುಗವಿಲ್ಲದ ತೋಟ*
*ದೇವರಿಲ್ಲದ ಗುಡಿ*
*ಇದ್ದರೇನೋ ಇಲ್ಲದಿದ್ದರೇನೋ.*

*ಜ್ಯೋತಿಯಿಲ್ಲದ ಮನೆ*
*ನೀತಿಯಿಲ್ಲದ ಹೆಣ್ಣು*

*ದೋತ್ರ ಹೊದೆಯದವನು*
*ಇದ್ದರೇನೋ ಇಲ್ಲದಿದ್ದರೇನೋ.*

*ಆರು ಇಲ್ಲದ ಕುರಿ*
*ಕುದುರೆ ಇಲ್ಲದ ಬಂಡಿ*
*ರಾಯರಿಲ್ಲದ ದಂಡು*
*ಇದ್ದರೇನೋ ಇಲ್ಲದಿದ್ದರೇನೋ.*

*ಅಜ್ಜಿಇಲ್ಲದ ಮನೆ*
*ಮಜ್ಜಿಗಿಲ್ಲದ ಊಟ*
*ಲಜ್ಜೆಗೆಟ್ಟ ನಾರಿ*
*ಇದ್ದರೇನೋ ಇಲ್ಲದಿದ್ದರೇನೋ.*

ತತ್ವಪದದ ರೀತಿಯಲ್ಲೂ ಹಾಡಿಕೊಳ್ಳಬಹುದಾದ ಈ ಕವಿತೆ ಸರಳವಾಗಿದೆ, ಇದರ ನೀತಿಯೂ ಸರಳವಾಗಿದೆ. ಜನಪದ ಸಮಾಜದಲ್ಲಿ ಕಂಡುಬರುವ ವಸ್ತುವಿಷಯಗಳನ್ನು ಉದಾಹರಣೆಯಾಗಿ ನೀಡಿ, ಯಾವುದು ಸರಿ, ಯಾವುದು ಸರಿಯಲ್ಲ ಎಂಬುದನ್ನು ತಿಳಿಸಿದೆ. ಕೇಳುಗರಿಗೇ ಪ್ರಶ್ನೆ ಹಾಕಿ, ಉತ್ತರ ಹೊರಡಿಸುವ ಚತುರತೆಯೂ ಇದೆ. ಎಲ್ಲವೂ ಸಾರ್ವತ್ರಿಕವಲ್ಲದಿದ್ದರೂ ತಾತ್ಕಾಲಿಕವಾಗಿಯಾದರೂ ಚಿಂತಿಸುವ ಅಂಶಗಳಿಲ್ಲದೆ ಇಲ್ಲ.

ಮನೆಯೆಂದ ಮೇಲೆ ಮಕ್ಕಳಿರಬೇಕು. ಮಕ್ಕಳ ಬಗೆಗೆ ಜನಪದರು ಮಿತಿಮೀರಿದ ಭರವಸೆಯನ್ನು ಹೊಂದಿದ್ದಾರೆ. ತೋಟವೆಂದ ಮೇಲೆ ಮರುಗ (ಸುವಾಸನೆಯ ಸಸ್ಯ) ವಿರಬೇಕು. ಹಳ್ಳಿಯ ತೋಟಗಳಲ್ಲಿ ಹೂಗಿಡಕ್ಕೆ ಅವಕಾಶ ಇದ್ದೇ ಇರುತ್ತದೆ. ದೇವಸ್ಥಾನವೆಂದ ಮೇಲೆ ದೇವರಿರಬೇಕು. ದೇವರಿಲ್ಲದ ಪಾಳುಗುಡಿಗೆ ಬೆಲೆಯಿಲ್ಲ. ಒಂದು ವೇಳೆ ಅಂಥದ್ದು ಇದ್ದರೆ ಅದು ವ್ಯರ್ಥ.

ಸಂಸಾರಸ್ಥರ ಮನೆಯೆಂದರೆ ಬೆಳಗುವ ಜ್ಯೋತಿ ಇರಬೇಕು. ಮುಸ್ಸಂಜೆಯಾದಂತೆ ನಂದಾದೀಪ ಹಚ್ಚದ ಮನೆ ಅನಿಷ್ಟದಂತಿರುತ್ತದೆ.

ಮನೆಯಲ್ಲಿ ದೀಪವೂ ಇರಬೇಕು; ದೀಪ ಹಚ್ಚಿಡುವ ಗೃಹಿಣಿಯೂ ಇರಬೇಕು. ಗೃಹಿಣಿಯಾದವಳು ನೀತಿವಂತೆಯಾಗಿರಬೇಕು. ಅನೀತಿಯ ಹೆಣ್ಣಿರುವ ಮನೆ ಅಪವಾದಕ್ಕೆ ಗುರಿಯಾಗುತ್ತದೆ. ಮನುಷ್ಯನೆಂದ ಮೇಲೆ ವಸ್ತ್ರಧಾರಿಯಾಗಿರಬೇಕು. ಅರೆಬೆತ್ತಲೆಯಾಗಿಯೋ ಬೆತ್ತಲೆಯಾಗಿಯೋ ಓಡಾಡುವುದು ಸಭ್ಯಸ್ಥನ ಲಕ್ಷಣವಲ್ಲ. ಬೆತ್ತಲೆಯಾಗಿದ್ದ ಆದಿಮಾನವ ಸಮಾಜಸ್ಥನಾದ ಮೇಲೆ ವಸ್ತ್ರಧಾರಿಯಾದ. ಅದು ನಾಗರೀಕತೆಯೆಂದು ಭಾವಿಸಿದ. ಅದನ್ನು ಉಲ್ಲಂಘಿಸದಂತೆ ಅನುಸರಿಸಿದ. ಆರ್ಥಿಕ ದುಸ್ಥಿತಿಯ ಬೆತ್ತಲೆತನವನ್ನೂ ಮನುಷ್ಯ ಸಹಿಸದಾದ. ಬೆತ್ತಲೆತನವನ್ನು ಟೀಕಿಸಲೂ ಮುಂದಾದ. ಸಾಮಾಜಿಕ ಒಪ್ಪಿತಕ್ಕೆ ವಿರುದ್ಧವಾದುದು ಅರ್ಥಹೀನವೆಂದು ಭಾವಿಸಿದ.

ಬೇಸಾಯಗಾರರೆಂದ ಮೇಲೆ ಉಳುವ ಎತ್ತುಗಳಿರಬೇಕು. ಅವುಗಳಿಂದ ಸಂಸಾರಕ್ಕೆ ಬೇಕಾದ ದವಸ ಧಾನ್ಯಗಳನ್ನು ಬೆಳೆದುಕೊಳ್ಳಬಹುದು. ಆರುಬಿಟ್ಟು ಕೇವಲ ಕುರಿ ಸಾಕಿಕೊಂಡರೆ ಸಾಲದು. ಕುರಿ ಕೂಡ ಆಹಾರದ ಅಥವಾ ಸಂಪತ್ತಿನ ಒಂದು ಅಂಗವೇ ಹೌದು. ಆದರೆ ಅದೇ ಸರ್ವಸ್ವವಾಗಲಾರದು. ಆರಿನ ಜೊತೆಗೆ ಕುರಿಯನ್ನೂ ಸಾಕಿದರೆ ಮಾತ್ರ ಲಾಭದಾಯಕ. ಜಟಕಾ ಬಂಡಿ ಉಪಯೋಗಕ್ಕೆ ಬರಬೇಕಾದರೆ, ಹೊಟ್ಟೆಪಾಡಿಗೆ ಸಂಪಾದನೆ ನೀಡಬೇಕಾದರೆ ಅದಕ್ಕೆ ಹೂಡುವ ಕುದುರೆ ಇರಬೇಕು. ಸೈನ್ಯಕ್ಕೆ ಬೆಲೆ ಬರುವುದು ರಾಜರಿದ್ದರೆ ಮಾತ್ರ. ರಾಜರೇ ಇಲ್ಲದೆ ಕೇವಲ ಸೈನ್ಯದ ಜವಾಬ್ದಾರಿ ದುಬಾರಿಯಾಗುತ್ತದೆ.

ಅವಿಭಕ್ತ ಕುಟುಂಬಕ್ಕೆ ಒಬ್ಬಳು ಅಜ್ಜಿ ಇದ್ದರೆ ಶೋಭೆ. ಚಿಕ್ಕಮಕ್ಕಳ ತಿಳಿವಳಿಕೆಗೆ, ಪರಂಪರೆಯ ವಿಷಯಗಳನ್ನು ಅರಿತುಕೊಳ್ಳುವುದಕ್ಕೆ ಅಜ್ಜಿ ಅವಶ್ಯಕ. ಸುಗ್ರಾಸ ಭೋಜನಕ್ಕಾದರೂ ಮಜ್ಜಿಗೆ ಇದ್ದರೇನೇ ತೃಪ್ತಿ. ಭಾರತೀಯ ಊಟದ ಪದ್ಧತಿಗಂತೂ ಮಜ್ಜಿಗೆ ಅನಿವಾರ್ಯ. ಹೆಣ್ಣಿಗೆ ನಾಚಿಕೆ ಅಲಂಕಾರವಿದ್ದಂತೆ. ನಾಚಿಕೆಬಿಟ್ಟ ಹೆಣ್ಣು ಎಲ್ಲರ ಟೀಕೆಗೆ ಪಾತ್ರಳಾಗುವುದು ಖಂಡಿತ.

ಹೆಣ್ಣಿನ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಈ ಗೀತೆಯಲ್ಲಿ ಪರ್ಯಾಯ ನೀತಿ ತುಂಬಿಕೊಂಡಿದೆ.

*ಅಹುದೆನ್ನಿರಣ್ಣಾ ನೀವ್ ಅಲ್ಲವೆನ್ನಿರೋ*
*ಬಲ್ಲಂಥ ಜಾಣರು ಜಾನಿಸೆನ್ನಿರೋ.*

*ಊರ ಮುಂದಲ ರೊಪ್ಪ*
*ಕೆರೆಯ ಮೇಗಲ ತೆಪ್ಪ*
*ಒಂದಿಗುಣ್ಣದ ಅಪ್ಪ*
*ಇದ್ಯಾತಕೋ ಜಾಣ?*

*ಬೇಡರ ಮನೆ ಕೊಂಗಿ*
*ಅರೆದೋಳಿನ ಅಂಗಿ*
*ಮಾತು ಕೇಳದ ತಂಗಿ*
*ಮುಂದ್ಯಾತಕೋ ಜಾಣ?*

*ಕೊರಮರ ಮನೆ ಕೊಡ್ತಿ*
*ಕದ್ದು ರೊಟ್ಟಿ ಸುಡುತಿ*
*ನಡತೆಯಿಲ್ಲದ ಹೆಂಡತಿ*
*ಇದ್ಯಾತಕೋ ಜಾಣ?*

*ಒಡ್ಡ ಹೊಡೆವುದು ಬಂಡಿ*
*ಕಳ್ಳ ನುಗ್ಗುದು ಕಂಡಿ*
*ಸೂಳೆಗೆ ಹೋಗುನು ಲಂಡಿ*
*ಅವನ್ಯಾತಕೋ ಜಾಣ?*

*ಕರಿಯ ಮಿಣಿಕೆಕಾಯಿ*
*ಮನೆಯ ಕಾಯದ ನಾಯಿ*
*ಮಾತು ಕೇಳದ ಸಿಪಾಯಿ*
*ಅವನ್ಯಾತಕೋ ಜಾಣ?*

*ಎಲೆಯ ಹಾಕದ ಬಾಯಿ*
*ಕೊಳೆತ ತೆಂಗಿನಕಾಯಿ*
*ಮಕ್ಕಳಿಲ್ಲದ ತಾಯಿ*
*ಇದ್ ಯಾತಕೋ ಜಾಣ?*

*ನಲ್ಲಿಮೇಗಳ ಮೊಸರು*
*ಕೆಳಗೆ ಬಿದ್ದರೆ ಕೆಸರು*
*ಗಂಡಗಲ್ಲದ ಬಸುರು*
*ಅದು ಯಾತಕೋ ಜಾಣ?*

ಜಾಣರನ್ನು ಪ್ರಶ್ನಿಸುವ ಮೂಲಕವೇ ನೀತಿಬೋಧೆ ಮಾಡುವ ಈ ಕವಿತೆಯಲ್ಲಿ ಶಬ್ದ ಚಮತ್ಕಾರವೂ ಹರಡಿಕೊಂಡಿದೆ. ಜಾಣರಾದವರು ಯೋಚನೆಮಾಡಿ ಸರಿಯಾದ ಉತ್ತರನೀಡುವ ಪರಿಯನ್ನು ನಿರೀಕ್ಷಿಸಿದೆ.

ಕುರಿಗಳಿಂದ ಜೀವನ ಮಾಡುವವರಿಗೆ ಕುರಿಗಳನ್ನು ಕೂಡುವ ಕುರಿದೊಡ್ಡಿ ಅಗತ್ಯ. ಆದರೆ ಅದು ಊರಿನ ಮುಂದುಗಡೆಯೇ ಇರಬಾರದು. ಅದು ವಾಸದ ಮನೆಗೆ ಹೊರತಾಗಿರುವುದು ಲೇಸೆಂಬ ಭಾವನೆ ಇದ್ದಂತಿದೆ. ತಿಪ್ಪೆ ಅಗತ್ಯವಾದುದಾದರೂ ಅದು ಮನೆಯ ಮುಂದೆಯೇ ಇದ್ದರೆ ಏನು ಚೆಂದ? ಊರಿನ ಪ್ರವೇಶದ್ವಾರ ಸ್ವಚ್ಛವಾಗಿರಬೇಕೆಂಬ ನೈರ್ಮಲ್ಯ ಅಪೇಕ್ಷೆ ಇಂತಹ ಅಭಿಪ್ರಾಯಕ್ಕೆ ಕಾರಣವಾಗಿರುವಂತಿದೆ. ಜೊಂಡು, ತಾವರೆ ದಂಟಿನ ಜಾಲ ಹರಡಿಕೊಂಡಿರುವ ಕೆರೆಯಲ್ಲಿ ದೋಣಿಯಿದ್ದರೆ ವಿಹಾರಕ್ಕೆ ಅನುಕೂಲವಾಗುವುದಿಲ್ಲ. ನದಿಯನ್ನು, ಹೊಳೆಯನ್ನು ದಾಟಿಸುವ ಕಡೆಗಾದರೆ ಅದು ಹೆಚ್ಚು ಉಪಯೋಗಕ್ಕೆ ಬರುತ್ತದೆ. ತಂದೆಯಾದವನು ಮಕ್ಕಳೊಡನೆ ಹಂಚಿ ಉಣ್ಣುವವನಾಗಬೇಕು. ಪ್ರತ್ಯೇಕತಾ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ತಂದೆ ಮಕ್ಕಳ ಪ್ರೀತಿಗೆ ಧಕ್ಕೆಯಾಗುತ್ತದೆ. ಅಂಥದು ಕೂಡದು.

ಅಂತ್ಯಪ್ರಾಸಕ್ಕೆ ಆದ್ಯತೆ ನೀಡಿರುವುದರಿಂದ ಸಹಜಾನ್ವಯ ಹಾಗೂ ದೂರಾನ್ವಯ ವಿಷಯಗಳು ತಳಕುಹಾಕಿಕೊಂಡಿವೆ.

ದವಸ ಧಾನ್ಯವನ್ನು ಶುಚಿಮಾಡುವ ಮೊರ ಎಲ್ಲರಿಗೂ ಬೇಕು. ಅದನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಮುನ್ನೆಚ್ಚರಿಕೆಯ ಕ್ರಮ. ಆದರೆ ಬೇಡರ ಮನೆಯಲ್ಲಿ ಅದನ್ನು ಸರಿಯಾಗಿ ರಕ್ಷಿಸದೆ ಇಟ್ಟುಕೊಳ್ಳುವುದರಿಂದ ಅಂಥ ಮೊರ ಉಪಯೋಗಕ್ಕೆ ಬರುವುದಿಲ್ಲ. ಇದು ಬೇಡರಿಗಷ್ಟೇ ಅಲ್ಲ, ಯಾರಿಗಾದರೂ ಅನ್ವಯಿಸಬಹುದು. ಉಪಯೋಗಿಸುವ ಸಾಧನಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳದಿದ್ದರೆ ಏನೇನೂ ಪ್ರಯೋಜನವಿಲ್ಲ. ಅರೆತೋಳಿನ ಅಂಗಿ ಪೂರ್ತಿತೋಳು ಮುಚ್ಚದಿದ್ದರೂ ಗಾಳಿಯಾಡುವ ದೃಷ್ಟಿಯಿಂದ ಒಳ್ಳೆಯದೇ. ಆದರೆ ಪೂರ್ತಿ ತೋಳಿನ ಅಂಗಿಯೇ ಉತ್ತಮವೆನ್ನುವ ಭಾವನೆ ಇದ್ದಂತಿದೆ. ಮೈ ಮುಚ್ಚುವಂತೆ ಬಟ್ಟೆ ಧರಿಸುವುದು ಆರ್ಥಿಕ ಸುಸ್ಥಿತಿಯ ಲಕ್ಷಣವೂ ಹೌದು; ನಾಗರೀಕತೆಯ ಲಕ್ಷಣವೂ ಹೌದು. ಹೇಳಿದ ಮಾತನ್ನು ಕೇಳುವ ತಂಗಿಯಾದರೆ ಎಲ್ಲರಿಗೂ ಅಚ್ಚು ಮೆಚ್ಚು. ಮಾತುಕೇಳದ ಮಗಳು ಇಲ್ಲದ ಕಿರಿಕಿರಿಗೆ ಕಾರಣಳಾಗುತ್ತಾಳೆ.

ಮುಂದಾಗಿ ಕಾಣಿಸಿಕೊಳ್ಳುವ ವಸ್ತು ವ್ಯಕ್ತಿಗಳು ಎಲ್ಲರೂ ಒಪ್ಪುವಂತೆ ಲಕ್ಷಣವಾಗಿರಬೇಕು; ಇಲ್ಲದಿದ್ದರೆ ಅಪಶಕುನವಾಗುತ್ತದೆ. ಅಲೆಮಾರಿ ಜನರ ಮನೆಯ ಸುತ್ತಿಗೆ, ಕದ್ದು ರೊಟ್ಟಿಸುಡುವ ಪ್ರವೃತ್ತಿ, ನಡತೆ ಗೆಟ್ಟ ಹೆಂಡತಿ ಇದ್ದರೂ ಪ್ರಯೋಜನವಾಗುವುದಿಲ್ಲ. ಈ ಪದ್ಯ ಭಾಗದ ಮೊದಲೆರಡು ಸಾಲುಗಳು ಅಂತ್ಯ ಪ್ರಾಸಕ್ಕಾಗಿಯೇ ಬಳಕೆಯಾಗಿರುವಂತಿವೆ. ಯಾರ ಮನೆಯ ಸುತ್ತಿಗೆಯಾದರೂ ಬಳಸುವುದಕ್ಕೆ ಅಡ್ಡಯೇನೂ ಇಲ್ಲ. ರೊಟ್ಟಿಸುಟ್ಟರೆ ಮನೆಮಂದಿಗೆಲ್ಲ ತಿಳಿಯುತ್ತದೆ. ಎಲ್ಲರಿಗೂ ಗೊತ್ತಾಗುವಂತೆ ರೊಟ್ಟಿ ಮಾಡಿ ಊಟ ಮಾಡಿದರೆ ಸೊಗಸು. ಕದ್ದು ರೊಟ್ಟಿ ಸುಟ್ಟು ತಿನ್ನುವ ಗುಣ ಗೃಹಿಣಿಗೆ ತಕ್ಕುದಲ್ಲ.

ಕಲ್ಲುಒಡ್ಡ ಬಂಡೆಯನ್ನು ಸೀಳುತ್ತಾನೆ. ಅದು ಅವನ ಕಸಬು. ಕಳ್ಳ ಕನ್ನ ಕೊರೆದು ಒಳನುಗ್ಗುತ್ತಾನೆ. ಅದು ಅವನ ಕಸಬು. ಗೃಹಸ್ಥನಾಗಿದ್ದರೂ ಹೊರಚಾಳಿಯ ಗಂಡಸು ಸೂಳೆಯ ಸಹವಾಸಕ್ಕೆ ಹೋಗುವುದನ್ನು ಕಸಬು ಮಾಡಿಕೊಳ್ಳುತ್ತಾನೆ. ಹೊರಚಾಳಿ ಕಸಬು ಹೊಲಸು. ಒಡ್ಡನ ಕಸಬು, ಕಳ್ಳನ ಕಸಬು ಸಹ್ಯ; ಆದರೆ ವ್ಯಭಿಚಾರಿಯ ಕಸಬು ಅಸಹ್ಯ.

ಮಿಣಿಕೆಕಾಯಿ ಹಣ್ಣಾದರೆ ತಿನ್ನುವುದಕ್ಕೆ ರುಚಿ. ಅದು ಹಳದಿ ಬಣ್ಣಕ್ಕೆ ತಿರುಗುತ್ತದೆ. ಕಪ್ಪು ಮಿಣಿಕೆಕಾಯಿ ಬಹುಶಃ ಕಹಿ. ಅದರ ಉಪಯೋಗ ಕಡಮೆ. ಕರಿಯ ಮಿಣಿಕೆಕಾಯಿ ಟೀಕೆಗೆ ಒಳಗಾಗುವುದಕ್ಕೆ ಬೇರೆಯ ಕಾರಣವೂ ಇರಬಹುದು. ನಾಯಿ ನಿಯತ್ತಿಗೆ ಹೆಸರುವಾಸಿ, ಮನೆ ಕಾಯುವುದರಲ್ಲೂ ಮುಂದು. ಆದರೆ ಕೆಲವು ಸೋಮಾರಿ ನಾಯಿಗಳು ಮನೆಯ ರಕ್ಷಣೆ ಮಾಡುವುದಿಲ್ಲ. ವೃಥಾ ತಿಂದು ಮಲಗಿ ಕಾಲಕಳೆಯುತ್ತವೆ. ಸಿಪಾಯಿಯಾದವನು ಮುಖ್ಯಸ್ಥನ ಆಜ್ಞೆಯನ್ನು ಚಚು ತಪ್ಪದೆ ಪಾಲಿಸಬೇಕು. ಒಡೆಯನ ಮಾತನ್ನು ಕೇಳದ ಸೈನಿಕ ವ್ಯರ್ಥ.

ತಾಂಬೂಲ ಮೆಲ್ಲುವುದು ನಮ್ಮಲ್ಲಿ ಹಿಂದಿನಿಂದಲೂ ನಡೆದುಕೊಡು ಬಂದಿರುವ ಪದ್ಧತಿ. ಆರೋಗ್ಯ ವರ್ಧನೆಗೂ ರಸಿಕತೆಯ ಉತ್ತೇಜನಕ್ಕೂ ತಾಂಬೂಲ ಪ್ರಿಯವಾಗಿದೆ. ಮಂಗಳ ಕಾರ್ಯಗಳಲ್ಲೂ ತಾಂಬೂಲಕ್ಕೆ ಅಗ್ರಸ್ಥಾನವಿದೆ. ಫಲತಾಂಬೂಲವೆಂಬ ಮಾತು ಶುಭಸೂಚಕವಾಗಿದೆ. ಸನ್ಯಾಸಿಗಳಿಗೆ ಮಾತ್ರ ತಾಂಬೂಲ ಕೊಡುವುದಿಲ್ಲ. ವೀಳ್ಯೆದೆಲೆಯನ್ನು ಜಿಗಿದರೆ ಬಾಯಿಗೆ ಲಕ್ಷಣ. ತಾಂಬೂಲ ಮೆಲ್ಲುವುದರಿಂದ ಹಲ್ಲು ಕೆಂಚಾದರೂ ನಾಲಗೆ ತುಟಿ ವರ್ಣಮಯವಾಗುತ್ತದೆ. ಇಂಗು ತೆಂಗು ಮುಂದಾಗಿದ್ದರೆ ಮಂಗನೂ ಅಡಿಗೆ ಮಾಡುತ್ತೆ ಎಂಬ ಗಾದೆಯಿದೆ. ನಮ್ಮಲ್ಲಿ ಹಲವು ಸಂದರ್ಭಗಳಲ್ಲಿ ತೆಂಗಿನ ಕಾಯಿಯನ್ನು ಬಳಸುವುದುಂಟು. ಮುತ್ತೈದೆಯರಿಗೆ ಕುಂಕುಮ

ಕೊಡುವಾಗ, ಫಲತಾಂಬೂಲ ನೀಡುವಾಗ, ದೇವರಿಗೆ ಪೂಜೆ ಸಲ್ಲಿಸುವಾಗ, ನಾನಾ ರೀತಿಯ ಭಕ್ಷ್ಯ ತಯಾರಿಸುವಾಗ ತೆಂಗಿನ ಕಾಯಿ ಅಗತ್ಯ. ಆದರೆ ಕೊಳೆತ ತೆಂಗಿನಕಾಯಿ ಯಾವ ಉಪಯೋಗಕ್ಕೂ ಬರುವುದಿಲ್ಲ. ಹಾಗೆಯೇ ಮಕ್ಕಳಿಲ್ಲದ ತಾಯಿಯ ಬಾಳು ವ್ಯರ್ಥವಾಗುತ್ತದೆ. ನಮ್ಮ ಸಾಂಸ್ಕೃತಿಕ ಸಂಸಾರಿಕ ಸಂದರ್ಭದಲ್ಲಿ ಮಕ್ಕಳಿಲ್ಲದ ಬಂಜೆಗೆ ಗೌರವಾರ್ಹವಾದ ಸ್ಥಾನಮಾನ ಇಲ್ಲ. ಜನಪದರು ಸಂತಾನ ಮುಂದುವರಿಕೆಯ ಮಕ್ಕಳಿಗೆ ಅಧಿಕ ಪ್ರಾಶಸ್ತ್ಯ ನೀಡಿದ್ದಾರೆ.

ಮೊಸರು ಪೌಷ್ಟಿಕ ಆಹಾರ. ಮನುಷ್ಯನಿಗೆ ಎಮ್ಮೆ ಹಸುಗಳ ಸಂಪರ್ಕ ಬಂದಾಗಿನಿಂದಲೂ ಮೊಸರು ಬೆಣ್ಣೆ ತುಪ್ಪದ ಬಳಕೆ ನಡೆದಿದೆ. ಧಾರ್ಮಿಕಾಚರಣೆಗಳಲ್ಲಿ ಮೊಸರನ್ನವನ್ನು ಪ್ರಸಾದವಾಗಿ ಬಳಸುವುದೂ ಉಂಟು. ಮೊಸರನ್ನವನ್ನು ಊಟಮಾಡದ ಜನಪದರೇ ಇಲ್ಲ. ಅಂಥ ಉಪಯುಕ್ತವಾದ ಮೊಸರನ್ನವನ್ನು ನೆಲುವಿನ ಮೇಲಿಟ್ಟು (ಬೆಕ್ಕಿನಿಂದ ರಕ್ಷಿಸಲು) ಜೋಪಾನವಾಗಿ ರಕ್ಷಿಸುತ್ತಾರೆ. ಆದರೆ ಅಚಾತುರ್ಯದಿಂದ ಅದು ಕೆಳಗೆ ಬಿದ್ದರೆ ಕೆಸರಾಗುತ್ತದೆ. ಅದನ್ನು ಬಳಸುವುದಕ್ಕಾಗುವುದಿಲ್ಲ. ಹಾಗೆಯೇ ಗಂಡನಿದ್ದರೂ ಅನೈತಿಕ ಸಂಬಂಧದಿಂದಾಗಿ ಬಸಿರು ವ್ಯರ್ಥವಾಗುತ್ತದೆ; ಸಮಾಜದ ಟೀಕೆಗೆ ಒಳಗಾಗುತ್ತದೆ; ಪಾವಿತ್ರ್ಯವನ್ನು ಕಳೆದುಕೊಳ್ಳುತ್ತದೆ. ಅಂಥ ಸಂತಾನವನ್ನು ಸಮಾಜ ಮನ್ನಿಸುವುದಿಲ್ಲ.

ಯಾವುದೇ ಸಾಮಾಜಿಕ ಸಂದರ್ಭಗಳು ಇಂಥ ಕವಿತೆಯ ಹುಟ್ಟಿಗೆ ಕಾರಣವಾಗುತ್ತವೆ. ಹುಟ್ಟಿದ ಸಂದರ್ಭದ ಎಲ್ಲ ಘಟನೆಗಳನ್ನೂ ಇಂದು ಸುಲಭವಾಗಿ ಅರ್ಥೈಸಲು ಆಗುವುದಿಲ್ಲ. ಕೆಲವು ಸಂದರ್ಭಕೊಂಡಿಗಳು ಯಾವಾಗಲೋ ಕಳೆದುಕೊಂಡಿವೆ; ಅಥವಾ ಸಿಕ್ಕಾಗಿವೆ.

ಉತ್ತಮ ಸಂಸಾರಿಗಳಾಗಲು, ಸಂಸಾರದ ಸದಸ್ಯರನ್ನು ಅರ್ಥಮಾಡಿಕೊಳ್ಳಲು, ಗುರು ಹಿರಿಯರನ್ನು ಗೌರವಿಸಲು, ನೆರೆ ಹೊರೆ ಬಂಧು ಬಳಗದೊಡನೆ ಹೊಂದಿಕೊಳ್ಳಲು, ಪರರನ್ನು ತನ್ನಂತೆ ಕಾಣಲು, ಲೋಕಾನುಭವವನ್ನು ಗಳಿಸಲು, ಬಾಳಾಟದ ಮರ್ಮವನ್ನು

ಮನನಮಾಡಲು, ದೇವರ ಅಸ್ತಿತ್ವವನ್ನು ಅರಿಯಲು, ಜೂಜು ವ್ಯಭಿಚಾರದಿಂದ ದೂರವಿರಲು, ಬಡವರ ಬಗೆಗೆ ಅನುಕಂಪ ತೋರಲು, ಮಾನವೀಯತೆ ಮೆರೆಯಲು, ಬದುಕಿನ ಅಶಾಶ್ವತತೆಯನ್ನು ಗುರುತಿಸಲು, ಒಟ್ಟಾರೆ ಮನುಷ್ಯನನ್ನು, ಮನುಷ್ಯ ಜೀವನವನ್ನು ತಿದ್ದಲು, ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ನೀತಿಸೂಕ್ತಿಗಳು ಅಪಾರವಾಗಿ ದುಡಿದಿವೆ, ಮನುಕುಲಕ್ಕೆ ಬೆಳಕು ನೀಡಿವೆ.

ಜನಪದ ನೀತಿಗೀತೆಗಳು ಹೆಚ್ಚಾಗಿ ಕೂಡುಕುಟುಂಬ ಅಥವಾ ಅವಿಭಕ್ತ ಕುಟುಂಬವನ್ನು ದೃಷ್ಟಿಯಲ್ಲಿಟ್ಟುಕೊಂಡು ಹುಟ್ಟಿರುವಂತೆ ಕಾಣುತ್ತವೆ. ನಮ್ಮ ಸಮಾಜ ದೀರ್ಘಕಾಲದವರೆಗೆ ಅವಿಭಕ್ತ ಕುಟುಂಬವೇ ಸರ್ವಶ್ರೇಷ್ಠವೆಂದು ಭಾವಿಸಿತ್ತು. ಕುಟುಂಬದ ಸದಸ್ಯರೆಲ್ಲ ವೃತ್ತಿಗಾಗಿ ಪರಸ್ಥಳಕ್ಕೆ ಹೋಗುವ ಅಗತ್ಯವು ಇರಲಿಲ್ಲವಾದುದರಿಂದ, ಒಂದೇ ಕಡೆ ಜೀವನ ಪೂರ್ತಿ ಬಾಳಬೇಕಾಗಿದ್ದುದರಿಂದ, ಇದು ಅನಿವಾರ್ಯವಾಗಿತ್ತು. ಸಾಮಾನ್ಯವಾಗಿ ಕುಟುಂಬದಲ್ಲಿ ಮೂರು ತಲೆಮಾರಿನ ಜನರಿರುತ್ತಿದ್ದರು. ಇಂಥ ಕಡೆ ಹೆಣ್ಣಾಗಲೀ ಗಂಡಾಗಲೀ ಬಹಳ ಸಹನೆಯಿಂದ ನಡೆದುಕೊಳ್ಳಬೇಕಾಗುತ್ತಿತ್ತು. ಒಟ್ಟು ಕುಟುಂಬದ ಕಾಳಜಿ ಎಲ್ಲರಿಗೂ ಇರಬೇಕಾಗುತ್ತಿತ್ತು.

ಜನಪದ ನೀತಿಸಾಹಿತ್ಯಕ್ಕೆ ಜನಪದರೇ ಸೃಷ್ಟಿಕರ್ತರು; ಜನಪದರೇ ಪೋಷಕರು; ಜನಪದರೇ ಸಂವಾಹಕರು. ಜನಪದ ನೀತಿಕೋವಿದರು ಶಾಲಾ ಕಾಲೇಜುಗಳಲ್ಲಿ ಕಲಿತವರಲ್ಲ; ಸುಶಿಕ್ಷಿತರಿಂದ ತರಬೇತಿ ಪಡೆದವರಲ್ಲ. ಬದುಕಿನ ಪರೀವೀಕ್ಷಣೆಯಿಂದ ಸ್ವತಃ ಕಲಿತುಕೊಂಡವರು. ಮುಗ್ಧ ಜನಪದ ಸ್ವಾನುಭವಿಗಳ ತಿಳುವಳಿಕೆ ನೀತಿಸೂಕ್ತಿಯಾಗಿ ಮಾರ್ಗದರ್ಶಿಯಾಗಿ ತಲೆಮಾರಿನಿಂದ ತಲೆಮಾರಿಗೆ ಮುಂದುವರಿದಿದೆ. ಸಮಷ್ಟಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಸಂಜೀವಿನಿಯಾದ ಜನಪದರ ಅನುಭವ ಇಂದಿಗೂ ಪ್ರಸ್ತುತವಾಗಿದೆ.

* * *

ಹೆಣ್ಣು ಸಂಸಾರದ ಕಣ್ಣು. ಹೆತ್ತ ಮನೆಗೂ ಕೊಟ್ಟ ಮನೆಗೂ ಹೆಸರಾಗಬೇಕಾದ ಬೆಳಕು. ಮಾತೃಪ್ರಧಾನ ವ್ಯವಸ್ಥೆಯಾಗಲೀ ಪಿತೃಪ್ರಧಾನ ವ್ಯವಸ್ಥೆಯಾಗಲೀ ಸಂಸಾರದಲ್ಲಿ ಹೆಣ್ಣಿನ ಸ್ಥಾನ ಮುಖ್ಯವಾದದ್ದು. ಆಕೆ ಕೇವಲ ಹೆಣ್ಣಲ್ಲ; ಗೃಹಿಣಿ. ಗೃಹದ ಸಮಸ್ತ ಆಗುಹೋಗು ಅವಳನ್ನು ಅವಲಂಬಿಸಿರುತ್ತದೆ. ಅಕ್ಷರ ಸಂಸ್ಕೃತಿಯಿಲ್ಲದ ಜನಪದ ಬದುಕಿನಲ್ಲಿ ಹಿರಿಯರ ಲೋಕಾನುಭವದ ತಿಳಿವಳಿಕೆಯೇ ಅವಳಿಗೆ ಶಿಕ್ಷಣ. ತಾಯಿಯ ಜೊತೆಯಲ್ಲೋ ಅತ್ತೆಯ ಜೊತೆಯಲ್ಲೋ ರಾಗಿ ಬೀಸುವಾಗ, ಮನೆಮಂದಿಯೊಡನೆ ಕೃಷಿಕಾಯಕ ಮಾಡುವಾಗ, ಅವಳು ಪಡೆದ ಲೋಕನೀತಿ ಬಾಳಿನ ಬುತ್ತಿ. ಕನ್ನಡ ಜನಪದ ಗೀತೆಗಳಲ್ಲಿ ನೀತಿಸಂಹಿತೆಯ ಪ್ರಧಾನ ಅಂಗವೇ ಇದೆ. ತಾಯಿ ತಂದೆಯರಿಗೆ ಮಗಳಾಗಿ, ಅಕ್ಕತಂಗಿ ಅಣ್ಣತಮ್ಮಂದಿರಿಗೆ ಸೋದರಿಯಾಗಿ, ಅತ್ತೆ ಮಾವಂದಿರಿಗೆ ಸೊಸೆಯಾಗಿ, ಗಂಡನಿಗೆ ಹೆಂಡತಿಯಾಗಿ, ಮಕ್ಕಳಿಗೆ ತಾಯಿಯಾಗಿ, ನೆರೆಹೊರೆಯರಿಗೆ ಬಂಧುವಾಗಿ, ಹೆಣ್ಣು ಆತ್ಮೀಯವಾಗಿ ನಡೆದುಕೊಳ್ಳಬೇಕಾಗುತ್ತದೆ.

ಹೆಣ್ಣು ಸುಸಂಸ್ಕತಳಾದರೆ ಸಂಸಾರ ಸುಸಂಸ್ಕೃತವಾಗುತ್ತದೆ; ಸಮಾಜ ಸುಸಂಸ್ಕೃತವಾಗುತ್ತದೆ. ಹೆಣ್ಣಿನ ಬದುಕಿನ ಚೌಕಟ್ಟನ್ನು ಜನಪದ ಮನಸ್ಸು ನಿರ್ಧರಿಸಿದೆ. ಅದರ ನಿರೂಪಣೆ ಇಲ್ಲಿದೆ.

**ಪ್ರೊ. ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು**
ಬೆಂಗಳೂರು